ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಸೆಪ್ಟೆಂಬರ್ 2022 ಮಾಸ ಪತ್ರಿಕೆ

ಸಂಪುಟ/Volume : 44
ಸಂಚಿಕೆ/Issue : 12
ಪುಟ/Pages : 12
ಬೆಲೆ/Price : ₹ 10/–

**Akhila Karnataka Shikshaka Samachar | September 2022 | Monthly**






**A Journal of Karnataka Rajya Madhyamika Shikshaka Sangha (R.)**

## ಸಂಪಾದಕೀಯ

ನಾಡಿನ ಶಿಕ್ಷಕರೆಲ್ಲರಿಗೂ ನಾಡ ಹಬ್ಬ ದಸರಾದ ಶುಭಾಶಯಗಳು,

ಶರದೃತುವಿನ ಪ್ರಾರಂಭದೊಂದಿಗೆ ಅಶ್ವಯುಜ ಮಾಸ ಪ್ರಾರಂಭವಾಗುತ್ತಲೇ ನಮ್ಮ ನಾಡಿನ ಜನತೆಗೆ ನವರಾತ್ರಿಯ ಸಂಭ್ರಮ ಪ್ರಾರಂಭವಾಗುತ್ತದೆ. ನಾಡಹಬ್ಬ ಎಂದಕೂಡಲೇ ನಮಗೆಲ್ಲಾ ನೆನಪಾಗುವುದು ನವರಾತ್ರಿಯ ಸಂಭ್ರಮ. ಈ ಸಂಭ್ರಮವನ್ನು ಎಷ್ಟು ವರ್ಣಿಸಿದರೂ ಸಾಲದು. ಹಿಂದೆ ವಿಜಯನಗರ ಕಾಲದಲ್ಲಿ ದಸರಾ ಆಚರಣೆ ನಡೆಯುತ್ತಿತ್ತು ಎನ್ನುವುದಕ್ಕೆ ಅನೇಕ ಪುರಾವೆಗಳಿವೆ. ಅದರಲ್ಲಿ ಹಂಪೆಯ ಮಹಾನವಮಿ ದಿಬ್ಬವು ಒಂದು. ಮಹಾನವಮಿ ದಿಬ್ಬದ ಮೇಲೆ ಕುಳಿತು ರಾಜರು ದಸರಾ ಉತ್ಸವವವನ್ನು ವೀಕ್ಷಿಸುತ್ತಿದ್ದರು.

ದಸರಾ ಹಬ್ಬವೂ ನವರಾತ್ರಿಗಳ (ಒಂಭತ್ತು ದಿನಗಳ) ಹಬ್ಬ. ಇದನ್ನು ಮಹಾನವಮಿ ಎಂದೂ ಕರೆಯುವುದುಂಟು. ದಸರಾ ಹಬ್ಬವು ದುಷ್ಟರ ಶಿಕ್ಷೆ ಮತ್ತು ಶಿಷ್ಟರ ರಕ್ಷಣೆ ಮಾಡಲು ದುರ್ಗಾದೇವಿಯು ಒಂಭತ್ತು ಅವತಾರಗಳನ್ನು ಎತ್ತಿದಳು. ಇದು ದಸರಾ ಹಬ್ಬದ ಮಹತ್ವ. ಈ ಹಬ್ಬದಲ್ಲಿ ನವದುರ್ಗಿಯರನ್ನು ಪೂಜೆ ಮಾಡಲಾಗುವುದು. ಕೊನೆಯ ದಿನ ಮಹಿಷಾಸುರ ಎನ್ನುವ ದುಷ್ಟನನ್ನು ಕೊಲ್ಲುವಳು. ಈ ಒಂಭತ್ತು ದಿನಗಳ ಕಾಲ ದೇವಿಗೆ ವಿಶೇಷ ಅಲಂಕಾರ ಮಾಡಿ ಪೂಜೆ ಮಾಡುವರು. ಕೊನೆಯ ದಿನ ವಿಜಯದಶಮಿಯನ್ನು ಆಚರಿಸಿ, ಬನ್ನಿ ಮುಡಿಯುವರು. ಈ ಹಬ್ಬದಲ್ಲಿ ನವದುರ್ಗೆಯರನ್ನು ಒಂದೊಂದು ದಿನ ಒಂದೊಂದು ರೀತಿಯ ಅವತಾರಕ್ಕೆ ತಕ್ಕ ಹಾಗೆ ಅಲಂಕಾರ ಮಾಡುವರು. ಹಾಗೆ ಪೂಜೆ ಮಾಡುವುದರಿಂದ ಇಷ್ಟಾರ್ಥ ಸಿದ್ಧಿಯಾಗುತ್ತದೆ, ಶಾಂತಿ, ನೆಮ್ಮದಿ, ಸುಖ-ಸಂತೋಷಗಳು ಲಭಿಸುತ್ತವೆ.

ವಿಜಯದಶಮಿ ದಿನ ಬನ್ನಿ ಪೂಜೆ ಮಾಡಿ, ಮನೆಗೆ ಬನ್ನಿಯನ್ನು ತರುವರು. ಮನೆಯಲ್ಲಿಯೂ ಬನ್ನಿ ಪೂಜೆ ಮಾಡಿ, ಮನೆಯವರಿಗೆ, ನೆರೆ-ಹೊರೆಯವರಿಗೆ ಬನ್ನಿ ಕೊಟ್ಟು ಬಾಳು ಬಂಗಾರವಾಗಲಿ ಎನ್ನುವರು.

ದಸರಾ ಹಬ್ಬದ ಮತ್ತೊಂದು ವಿಶಿಷ್ಟ ಎಂದರೆ ಗೊಂಬೆ ಪೂಜೆ. ಗೊಂಬೆಯನ್ನು ಇಡುವಾಗ ಪ್ರಮುಖವಾಗಿ ಪಟ್ಟದ ಗೊಂಬೆಗಳನ್ನು ಇಡಬೇಕು. ಲಕ್ಷ್ಮಿ, ಸರಸ್ವತಿ, ನವದುರ್ಗೆಯರು, ಗಣಪತಿ, ರಾಧಾ, ಕೃಷ್ಣ, ರುಕ್ಮಿಣಿ, ಸತ್ಯಭಾಮ, ರಾಮ ಸೀತಾ ಹೀಗೆ ಇನ್ನು ಅನೇಕ ಗೊಂಬೆಗಳನ್ನು ಇಡುವರು.

ಮೈಸೂರು ದಸರಾ ಬಹಳ ಹೆಸರುವಾಸಿಯಾಗಿದೆ. ನಾವು ನಮ್ಮ ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ದಸರಾ ಹಬ್ಬದ ಮಹತ್ವವನ್ನು ತಿಳಿಸುವುದರ ಜೊತೆಗೆ ದಸರಾ ಉತ್ಸವವನ್ನು ತೋರಿಸಬೇಕು. ಇದರಿಂದ ಅವರಿಗೆ ನಾಡಿನ ಸಾಂಸ್ಕೃತಿಕ ಹಿರಿತನವನ್ನು ಪರಿಚಯಿಸಿದಂತಾಗುತ್ತದೆ.

ನಾಡದೇವಿ ಚಾಮುಂಡೇಶ್ವರಿಯು ತಮಗೆಲ್ಲಾ ಒಳಿತನ್ನು ಮಾಡಲಿ, ನಾಡಿನಲ್ಲಿರುವ ದುಷ್ಟತೆಯನ್ನು ಹೋಗಲಾಡಿಸಿ, ಶಿಷ್ಟತೆಯನ್ನು ಕಾಪಾಡಲಿ ಎಂದು ಶಿಕ್ಷಕ ಸಮಾಚಾರ ತಂಡ ಮತ್ತು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಬಯಸುತ್ತದೆ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ನವರಾತ್ರಿ ಹಬ್ಬ 3
- ಇಂಡಿಯಾದಿಂದ ಭಾರತದ ಕಡೆಗೆ... 4
- ಅಮೃತ ವಾಣಿ 5
- ವೀರ ಸಾವರ್ಕರ್ ಎಂಬ ಕ್ರಾಂತಿಕಾರಿ ಸಮಾಜ ಸುಧಾರಕ 6
- ಗಣಿತ – ಕಬ್ಬಿಣದ ಕಡಲೆ ಏಕೆ ? 7
- ಪ್ರಕೃತಿ 8
- ವಿದ್ಯಾರ್ಥಿ ಮಿತ್ರ 10
- 35 ನೇ ಪ್ರತಿಭಾ ಪುರಸ್ಕಾರ 11
- ಚಿತ್ರಸುದ್ದಿ 12

# ನವರಾತ್ರಿ ಹಬ್ಬ

**ವಿಜಯಲಕ್ಷ್ಮಿ**
ಉಪನ್ಯಾಸಕರು,
ಎಮ್. ಎಸ್. ರಾಮಯ್ಯ ಕಾಲೇಜ್

ಭಾರತವು ಅನೇಕ ಸಂಸ್ಕೃತಿ ಮತ್ತು ಸಂಪ್ರದಾಯಗಳ ನಾಡು. ಭಾರತದ ಸಂಸ್ಕೃತಿ ಇಷ್ಟು ಶ್ರೀಮಂತವಾಗಿರಲು ಕಾರಣ ಹಬ್ಬಗಳು. ಅದರಲ್ಲೂ ಹಬ್ಬಗಳು ಎಂದಾಗ ಕರ್ನಾಟಕ ಮೊದಲ ಸ್ಥಾನದಲ್ಲಿದೆ ಎಂದರೆ ತಪ್ಪಾಗಲಾರದು. ಮೈಸೂರು ದಸರಾ ಇಡೀ ಪ್ರಪಂಚವನ್ನೇ ತಿರುಗಿ ನೋಡುವಂತೆ ಮಾಡುವ ಐತಿಹಾಸಿಕ ಮಹತ್ವವುಳ್ಳ ನಾಡಹಬ್ಬವೂ ಹೌದು. ದಸರಾ ಹಬ್ಬವನ್ನು ನವರಾತ್ರಿ ಹಬ್ಬವೆಂದು ಕರೆಯುವ ರೂಢಿಯಿದೆ. ಮರೆಯಲಾಗದ ಸಾಮ್ರಾಜ್ಯವೆಂದೇ ಹೆಸರುವಾಸಿಯಾದ ವಿಜಯನಗರ ಸಾಮ್ರಾಜ್ಯದ ಅರಸರ ಕಾಲದಿಂದಲೂ ಆಚರಣೆಯಲ್ಲಿರುವ ನಾಡಹಬ್ಬ ಇದಾಗಿದೆ. ಶ್ರೀ ಕೃಷ್ಣ ದೇವರಾಯನ ಕಾಲದಿಂದಲೂ ಈ ಹಬ್ಬವನ್ನು ವಿಧಿವತ್ತಾಗಿ ವಿಜಯನಗರ ಅರಸರು ಆಚರಿಸುತ್ತಿದ್ದರು. ತದನಂತರ ಮೈಸೂರು ಒಡೆಯರಾದ ರಾಜಒಡೆಯರ್‌ರವರ ಕಾಲದಲ್ಲಿ ಮತ್ತೆ ಇದನ್ನು ಮಹಾನವಮಿ, ನವರಾತ್ರಿ ಎಂಬ ಆಚರಣೆಯಾಗಿ ಪುನರ್ ಸ್ಥಾಪಿತವಾಯಿತು.

ವಿಜಯನಗರದ ಕೃಷ್ಣದೇವರಾಯನ ಆಡಳಿತಾವಧಿಯಲ್ಲಿ ಒರಿಸ್ಸಾ ರಾಜನನ್ನು ಮಣಿಸಿದ ಜ್ಞಾಪಕಾರ್ಥವಾಗಿ ಮಹಾನವಮಿ ದಿಬ್ಬದ ನಿರ್ಮಾಣ ಮಾಡಲಾಯಿತು. ಈ ಮಹಾನವಮಿ ದಿಬ್ಬದ ಮೇಲೆಯೇ ನವರಾತ್ರಿ ಹಬ್ಬವನ್ನು ಆಚರಿಸಲಾಗುತ್ತಿತ್ತು. ಈ ಹಬ್ಬವನ್ನು ವಿಜಯನಗರ ಅರಸರು ವಿಧಿವತ್ತಾಗಿ ಆಚರಿಸುತ್ತಿದ್ದರು. ವಿಜಯ ಸಾಧನೆಯ ಸಂಕೇತವಾಗಿದ್ದ ತಮ್ಮ ಶಕ್ತಿ, ಸಾಹಸ, ಸಂಪತ್ತನ್ನು ವಿಜೃಂಭಣೆಯಿಂದ ಕೊನೆಯ ದಿನ ಪ್ರದರ್ಶಿಸಿ, ದಶಮಿಯ ದಿನವನ್ನು ಅರ್ಥಪೂರ್ಣಗೊಳಿಸುತ್ತಿದ್ದರು. ಇದೇ ಪರಂಪರೆಯನ್ನು ಮೈಸೂರಿನ ದಸರಾದಲ್ಲಿಯೂ ಮುಂದುವರೆಸಲಾಗಿದೆ.

ಒಂಬತ್ತು ದಿನಗಳನ್ನು ವಿಜಯ ದಶಮಿಯ ಉತ್ಸವಕ್ಕಾಗಿ ಮೀಸಲಿಡುತ್ತಿದ್ದ ವಿಜಯನಗರದ ಅರಸರು ಬೆಳಗಿನ ಅರ್ಧ ದಿನವನ್ನು ಪೂಜೆ, ಯಜ್ಞ, ಯಾಗ, ಬಲಿ ಮುಂತಾದವಕ್ಕೂ, ಮಧ್ಯಾಹ್ನದ ಉಳಿದರ್ಧವನ್ನು ವೈಭವ ಪ್ರದರ್ಶನಕ್ಕೂ ವಿನಿಯೋಗಿಸುತ್ತಿದ್ದರು. ಬೆಳಗಿನ ಪೂಜೆಯು ವಿಜಯಸೌಧದ ಮೇಲೆ ಕಟ್ಟಿದ ಪಟಗುಡಿಯಲ್ಲಿ ಆರಂಭಗೊಂಡು, ಗಜರಾಜ, ರಾಜಾಶ್ವಗಳ ಪೂಜೆ, ಕುರಿ–ಕೋಣಗಳ ಬಲಿ, ಯಜ್ಞ–ಯಾಗಾದಿಗಳ ಆಚರಣೆಗಳನ್ನು ಒಳಗೊಂಡಿರುತ್ತಿತ್ತು. ಇವನ್ನು ಆಚರಿಸುವಾಗ ಹಲವಾರು ಪುರೋಹಿತರ ಮಾರ್ಗದರ್ಶನವೂ, ಪರಿವಾರದ ಸಹಯೋಗವೂ ಅರಸನಿಗಿರುತ್ತಿತ್ತು. ಮಧ್ಯಾಹ್ನ ಅರಸನು ವಿಶ್ರಮಿಸಿದರೂ ಆಹಾರ ಸೇವಿಸುತ್ತಿರಲಿಲ್ಲ. ರಾತ್ರಿಯ ಕಾರ್ಯಕ್ರಮಗಳೆಲ್ಲವೂ ಮುಗಿದ ನಂತರವೇ ಉಪವಾಸ ಮುರಿದು ಉಪಹಾರ ಸೇವಿಸುತ್ತಿದ್ದನು.

ನವರಾತ್ರಿ ಸಂಭ್ರಮಾಚರಣೆಯಲ್ಲಿ ಮತ್ತೊಂದು ಆಕರ್ಷಣೀಯ ಸಂಗತಿಯೆಂದರೆ "ರಾಜ ದರ್ಬಾರು" ವಿಜಯ ಸೌಧದ ವೇದಿಕೆಯ ಮೇಲಿರಿಸಿದ ರಾಜಾಸನದಲ್ಲಿ ಅರಸನು ಕುಳಿತಾಗ ಅವನಿಗೆ ಅತ್ಯಂತ ಆಪ್ತ ಬಂಧುವರ್ಗದವರಲ್ಲಿ ಮೂರು–ನಾಲ್ಕು ಪ್ರತಿಷ್ಠಿತರು ಮಾತ್ರ ಅವನ ಹಿಂದೆ ಕುಳಿತುಕೊಳ್ಳಲು ಆಸನಗಳ ಏರ್ಪಾಡಾಗಿರುತ್ತಿತ್ತು. ಖಡ್ಗದಾರಿ ಅಂಗರಕ್ಷಕರು, ಹಡಪದವನು, ರಾಜಲಾಂಛನ ಹೊತ್ತವರು, ಚಿಮರಧಾರಿಗಳು, ಅರಸನ ಹಿಂದೆ ನಿಂತಿರುತ್ತಿದ್ದರು. ಈ ದೃಶ್ಯ ಜನರ ಕಣ್ಣಿಗೆ ದೇವಲೋಕದ ದೇವೇಂದ್ರನ ಚಿತ್ರಣವನ್ನೇ ಮೂಡಿಸುತ್ತಿತ್ತು. ಮತ್ತೊಂದೆಡೆ ವಿರೂಪಾಕ್ಷ ದೇವರನ್ನು ಸುತ್ತುವರಿದು ಬ್ರಾಹ್ಮಣರು ಚಾಮರಸೇವೆಯಲ್ಲಿ ನಿರತರಾಗಿರುತ್ತಿದ್ದರು. ಇಷ್ಟು ಜನರನ್ನು ಬಿಟ್ಟರೆ ಉಳಿದಂತೆ ಅರಸಿಯರು, ದಂಡನಾಯಕರು, ಸಾಮಂತರು ಇವರುಗಳಿಗೆ ಆವರಣದಲ್ಲಿ ನಿವೇಶನಗಳನ್ನು ಕಾಯ್ದಿರಿಸಲಾಗುತ್ತಿತ್ತು. ವಿಜಯ ಸೌಧದ ಪ್ರಾಂಗಣವನ್ನೆಲ್ಲ ವಾದ್ಯ– ಸಂಗೀತಗಾರರು, ನೃತ್ಯಗಾರ್ತಿಯರು, ಜಟ್ಟಿಗಳು, ಕುದುರೆ, ಆನೆ, ಒಂಟೆ, ಕಾಲ್ದಳದ ಭವಾರರು ಹಂಚಿಕೊಂಡು ನಿಲ್ಲುತ್ತಿದ್ದರು. ಇದನ್ನೆಲ್ಲ ನೋಡಿದರೆ ಅರಸನ, ಸಾಂಸ್ಕೃತಿಕ, ರಕ್ಷಣಾತ್ಮಕ ಅದ್ಭುತವನ್ನು ಕಾಣಬಹುದಾಗಿದೆ.

ಸಾಮಂತರು, ನಾಯಕರು, ದಂಡಾಧಿಪರು, ರಾಜ್ಯದ ಹಿರಿಯ ಅಧಿಕಾರಿಗಳು ಕಪ್ಪಕಾಣಿಕೆಗಳನ್ನು ಒಪ್ಪಿಸಿ ತಮ್ಮ ನಿಷ್ಠೆಯನ್ನು ವಿರೂಪಾಕ್ಷನ ಸಮ್ಮುಖದಲ್ಲಿ ಪ್ರದರ್ಶಿಸಿ ಅರಸನ ಅನುಗ್ರಹ ಸಂಪಾದಿಸಿಕೊಳ್ಳುವುದು ಸಂಜೆ ಕಾರ್ಯಕ್ರಮದ ಪ್ರಧಾನ ಉದ್ದೇಶವಾಗಿತ್ತು.

ಸಾಮಂತ ರಾಜರು ದಂಡನಾಯಕರು ಕಪ್ಪ ಒಪ್ಪಿಸುವ ಕಾರ್ಯಕ್ರಮದ ನಂತರ ಮನರಂಜನಾ ಕಾರ್ಯಕ್ರಮ ಆರಂಭಗೊಳ್ಳುತ್ತಿತ್ತು. ವಾರಾಂಗನೆಯ ನೃತ್ಯ, ಪೈಲ್ವಾನರ ಪಟ್ಟಿನ ಪ್ರದರ್ಶನ, ವಾದ್ಯ– ಸಂಗೀತಗಾರರ ಸೊಂಪು, ಗಾರುಡಿಗರ ಗತ್ತು, ಪಂಜನಾಳುಗಳ ಕೈಚಳಕ, ಪಶುಗಳ ಸಾಹಸದಾಟ, ವಿವಿಧ ವೇಷಧಾರಿಗಳ ಬೆಡಗಿನಾಟ, ವಿದೂಷಕರ ನಗೆನಾಟಕ ಮೊದಲಾದವು ಆವರಣದಲ್ಲೆಲ್ಲ ಅನಾವರಣಗೊಳ್ಳುತ್ತಿದ್ದವು. ಆಟಗಳ ಪ್ರದರ್ಶನಗೊಳ್ಳುತ್ತಿದ್ದಾಗ ತಾಳ, ಹಲಗೆ, ಮದ್ದಳೆ ಕಹಳೆಗಳನ್ನು ದಣಿವರಿಯದಂತೆ ವಾದ್ಯಗಾರರು ಮೊಳಗಿಸುತ್ತಿದ್ದರು. ಇವೆಲ್ಲವೂ ನವರಾತ್ರಿಯ ಸಂಭ್ರಮವಾದರೆ ದಶಮಿಯ ದಿನ ಸೈನ್ಯ ಕವಾಯತಿನ ಕಾರ್ಯಕ್ರಮದೊಂದಿಗೆ ಕೊನೆಗೊಳ್ಳುತ್ತಿತ್ತು.

ವಿಜಯನಗರ ಸಾಮ್ರಾಜ್ಯದ ಪತನಾನಂತರ ಮಹತ್ವದ ಹಬ್ಬ ಮಹಾನವಮಿ ನವರಾತ್ರಿಯನ್ನು ಮೈಸೂರು ಒಡೆಯರು ಬಹು ವೈಭವೋಪೇತವಾಗಿ ಆಚರಿಸುತ್ತಿದ್ದರು. ವಿಜಯನಗರದ ಈ ಸಾಂಸ್ಕೃತಿಕ ಪರಂಪರೆಯನ್ನು ಮುಂದುವರೆಸಿದ ಕೀರ್ತಿ ರಾಜಒಡೆಯರಿಗೆ ಸಲ್ಲಬೇಕು. ಮೊದಲ ಬಾರಿಗೆ ಅವರು 1610ನೆಯ ವರ್ಷದ ಸೆಪ್ಟೆಂಬರ್ 8 ರಿಂದ 17ರವರೆಗೆ ಆಚರಿಸಿದರು. ಕಂಠೀರವ ನರಸರಾಜ ಒಡೆಯರ್ ಆಳ್ವಿಕೆಯಲ್ಲಿಯೂ ಶ್ರೀರಂಗಪಟ್ಟಣದಲ್ಲಿಯೇ ಅದ್ದೂರಿಯಾಗಿ ಆಚರಿಸಿದ್ದರು. ನಂತರ ಬಂದಂತಹ ಅರಸರುಗಳು ಈ ಆರೋಗ್ಯಕರ ಸಂಪ್ರದಾಯವನ್ನು ತಮ್ಮ ಪೂರ್ವಜರಂತೆಯೇ ಮುಂದುವರೆಸುತ್ತಾ ಬಂದರು.

1799ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಪಟ್ಟಕ್ಕೆ ಬಂದು ಈ ಆಚರಣೆಯನ್ನು ಮೈಸೂರಿನಲ್ಲಿ ಆಚರಿಸಲು ಆರಂಭ ಮಾಡಿದರು. ಈಗ ಮೈಸೂರು ದಸರಾ ಕರ್ನಾಟಕದ ರಾಜ್ಯ ಉತ್ಸವವಾಗಿ ನಡೆಯುತ್ತಾ ಬಂದಿದೆ. ಇದುವರೆಗೆ 400ಕ್ಕೂ ಹೆಚ್ಚು ಉತ್ಸವಗಳು ಸಾಗುತ್ತಾ ಬಂದಿದೆ. ●

**ನಮ್ಮ ಹಿಂದೆ ಮುಂದೆ ಏನೇನಿದೆಯೋ ಎಂಬುದನ್ನು ತಿಳಿದುಕೊಳ್ಳುವುದರಲ್ಲಿಯೇ ಕಳೆದುಹೋಗುತ್ತೇವೆ.**

# ಇಂಡಿಯಾದಿಂದ ಭಾರತದ ಕಡೆಗೆ...



**ಚಿದಾನಂದ ಆ. ಪಾಟೀಲ**
**ರಾಜ್ಯ ಪ್ರಧಾನಕಾರ್ಯದರ್ಶಿ**
**ಕ.ರಾ.ಮಾ.ಶಿ.ಸಂ.**

ಗುಲಾಮಗಿರಿಯ ಮನೋಭಾವದಿಂದ ಸ್ವಾಭಿಮಾನದ ಸ್ವಾತಂತ್ರ್ಯದ ಕಡೆಗೆ ಸಾಗಬೇಕೆನ್ನುವ ಭಾರತೀಯರ ಮನದಿಚ್ಛೆಯಂತೆ ಸಾಗುವ ಕಾಲದ ಸಂಕ್ರಮಣದ ಅವಧಿಯಲ್ಲಿ ನಾವೆಲ್ಲ ಇದ್ದೇವೆ. ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಿಸಿದ ನಾವುಗಳು ಆತ್ಮಾವಲೋಕನ ಮಾಡಿಕೊಳ್ಳುವ ಕಾಲವಿದು. ದಾಸ್ಯತೆಯ ಸಂಕೇತವಾದ ವಸಹಾತು ನೀತಿಯಲ್ಲಿ ಬಳಲಿದ ಭಾರತ ಮಾತೆಯನ್ನು ಮುಕ್ತಿಗೊಳಿಸಲು ಭಾರತ ಮಾತೆಯ ದೇಶಪ್ರೇಮಿ ವೀರ ಭಾರತೀಯರು ಜೀವನದ ಹಂಗು ತೊರೆದು ಸರ್ವವನ್ನು ಸಮರ್ಪಿಸಿ ಸರಾಸರಿ 200 ವರ್ಷಗಳ ಕಾಲ ಹೋರಾಡಿರುವುದು ಇಂದು ಇತಿಹಾಸ. ಭಾರತೀಯರ ಹೋರಾಟ ಯುರೋಪಿಯನ್ನರ ಆಗಮನದಿಂದ ಮಾತ್ರ ಪ್ರಾರಂಭವಾಗಿರಲಿಲ್ಲ. ಭಾರತ ತನ್ನತನವನ್ನು ಉಳಿಸಿಕೊಳ್ಳಲು ಕ್ರಿ.ಶ ಪೂರ್ವದಿಂದಲೇ ಹೋರಾಟ ಪ್ರಾರಂಭಿಸಿದ್ದರು ಎನ್ನುವುದು ಇತಿಹಾಸ.

## ಪ್ರಾಚೀನ ಭಾರತದಲ್ಲಿ ಸ್ವಂತಿಕೆ...

ಪರಕೀಯರ ಆಕ್ರಮಣವನ್ನು ಅವಲೋಕಿಸಿದಾಗ ಪರ್ಷಿಯಾದ ದೊರೆ ಅಲೆಗ್ಸಾಂಡರ್‌ನಿಂದ ಭಾರತ ಆಕ್ರಮಣವನ್ನು ಎದುರಿಸ ಬೇಕಾಯಿತು. ಭಾರತೀಯ ವೀರತ್ವದ ಸಂಕೇತವಾದ ಪೌರಸನನ್ನು ಸೋಲಿಸಲಾಗದ ಪರ್ಷಿಯಾದ ದೊರೆ ಝೀಲಂ ನದಿಯ ದಡದಲ್ಲಿ ಸೋತು ಮರಳಿ ತನ್ನ ದೇಶಕ್ಕೆ ಹೊರಟ. ಭಾರತೀಯರು ಪರ್ಷಿಯಾದ ದೊರೆಗೆ ಕೊಟ್ಟ ಹೊಡೆತ ಹೇಗಿತ್ತು ಎಂದರೆ ಪ್ರಪಂಚವನ್ನೇ ಗೆಲ್ಲುತ್ತೇನೆ ಎಂದು ಹೊರಟ ವ್ಯಕ್ತಿ ಮರಳಿ ತನ್ನ ದೇಶಕ್ಕೆ ಹೋಗಲಾಗದೆ ಮಧ್ಯದಲ್ಲಿ ಬೀದಿಯ ಹೆಣವಾಗುವಂತೆ ಇತ್ತು ಎನ್ನವುದು ಇತಿಹಾಸ. ಪರಕೀಯ ಮೆಘಸ್ತಾನಿಸ್ ತನ್ನ ಗ್ರಂಥ ‘ಇಂಡಿಕಾ’ದಲ್ಲಿ ಬರೆದುಕೊಳ್ಳುತ್ತಾನೆ “ಭಾರತ ಸರ್ವಶಕ್ತ, ಸಂಪದ್ಭರಿತವಾದ, ಸ್ವಾಭಿಮಾನಿ ದೇಶ ಭಕ್ತರ ದೇಶವಾಗಿದೆ ಎಂದು ಇದರ ಅರ್ಥ. ಭಾರತ ಪ್ರಾಚೀನ ಕಾಲದಿಂದಲೂ ಸಮೃದ್ಧಿಯ ಸಂಕೇತವಾಗಿತ್ತು. ಸ್ವಂತಿಕೆಯಲ್ಲಿ ನಂಬಿಕೆ ಇಟ್ಟ ಭಾರತ ದೇಶಪ್ರೇಮಿ ಭಾರತೀಯರಿಂದ ಕೂಡಿತ್ತು. ತನ್ನ ನೆಲ ಜಲದ ರಕ್ಷಣೆಯ ಜೊತೆಯಲ್ಲಿ ಸ್ವಾವಲಂಬಿ ದೇಶ”ವಾಗಿತ್ತು.

## ಮಧ್ಯಯುಗದ ಕಾಲದಲ್ಲಿ ಭಾರತ...

ಈ ಕಾಲ ಘಟ್ಟದಲ್ಲಿ ಭಾರತವು ಅನೇಕ ಆಕ್ರಮಣಗಳನ್ನು ಎದುರಿಸಬೇಕಾಯಿತು. ಮಹಮದ್‌ಘೋರಿ, ಮೊಹಮದ್ ಘಜ್ನಿಯಿಂದ ಪ್ರಾರಂಭವಾದ ರಾಜಕೀಯ ಮತ್ತು ಸಾಂಕೇತಿಕ ದಾಳಿಗಳು ಯುರೋಪಿಯನ್ನರ ಆಗಮನದವರೆಗೂ ನಿರಂತರವಾಗಿ ನಡೆದು ಈ ದಾಳಿಗಳ ಸಂದರ್ಭದಲ್ಲಿ ಭಾರತೀಯತೆ ಮಂಕಾಗುವಂತಹ ಅನೇಕ ಘಟನೆಗಳು ನಡೆದವು. ಸ್ವಂತಿಕೆ ಕಣ್ಮರೆಯಾಗತೊಡಗಿತು. ಗುಲಾಮಿ ಮನೋಭಾವವೇ ನಮ್ಮ ಅಭಿವೃದ್ಧಿಯ ಸಂಕೇತ ಎನ್ನುವ ತಪ್ಪು ಕಲ್ಪನೆ ಬೆಳೆಯತೊಡಗಿತು. ಭಾರತೀಯರನ್ನು ಅವರ ಮೂಲ ಸಂಸ್ಕೃತಿಯಿಂದ ದೂರ ಮಾಡಲು ವಿದೇಶಿಯರು ನಿರಂತರ ಪ್ರಯತ್ನ ಮಾಡಿದರು. ಅದರ ಪ್ರತಿಫಲ ಭಾರತೀಯರಲ್ಲಿ ಸ್ವಂತಿಕೆಯಿಂದ ಹೊರಬಂದು, ಗುಲಾಮಿ ಮನೋಭಾವ ಬೆಳೆಯುವಂತೆ ಆಯಿತು. ಆದರೆ ಆಗಲೂ ಅನೇಕ ಸಾಮಾಜಿಕ ಚಿಂತಕರು ಆಧ್ಯಾತ್ಮದ ಚಿಂತಕರಾಗಿದ್ದ ಚೈತನ್ಯ ಪ್ರಭುಗಳು, ರಾಮಕೃಷ್ಣ ಪರಮಹಂಸರು, ಸಂತ ಮೀರಾಬಾಯಿ, ಏಕನಾಥ, ತುಕಾರಾಮ, ಮಧ್ವಾಚಾರ್ಯ, ರಾಮಾನುಜಾಚಾರ್ಯ ಮತ್ತು ದಾಸ, ಸಂತರು, ಶರಣರು, ಭಾರತೀಯತೆಯನ್ನು ಎಚ್ಚರಿಸುವ ಕಾರ್ಯ ನಿರಂತರವಾಗಿ ಮಾಡಿದರು.

ಈ ದಿನಮಾನಗಳಲ್ಲಿ ಅನೇಕ ತಪ್ಪು ಕಲ್ಪನೆಗಳನ್ನು ಪರಕೀಯರು ವ್ಯವಸ್ಥಿತವಾಗಿ ಭಾರತೀಯರಲ್ಲಿ ತುಂಬ ತೊಡಗಿದರು. ಅದರಲ್ಲಿ ಪ್ರಮುಖವಾಗಿ

* ಭಾರತ ದೇಶವಾಗಿರಲಿಲ್ಲ.
* ಆರ್ಯರು ಭಾರತೀಯರಲ್ಲ.
* ಯುರೋಪಿಯನ್ನರು ಭಾರತದ ಎಲ್ಲಾ ಅಭಿವೃದ್ಧಿಯ ಹರಿಕಾರರು.
* ಬ್ರಿಟಿಷರಿಂದ ಭಾರತ ಸುಸಂಸ್ಕೃತವಾಯಿತು.

ಹೀಗೆ ಅನೇಕ ತಪ್ಪು ಅಂಶಗಳನ್ನು ಭಾರತೀಯರಲ್ಲಿ ತುಂಬುವ ಪ್ರಯತ್ನದಲ್ಲಿ ಯಶಸ್ವಿಯಾದರು ಎಂಬುದು ದುರ್ದೈವದ ಸಂಗತಿ. ಪರಕೀಯ ಮನೋಭಾವ ಹೊಂದಿ ಭಾರತದಲ್ಲಿ ಹುಟ್ಟಿದ ಅನೇಕರು ಇದನ್ನು ಪ್ರಚಾರ ಪಡಿಸಿದರು. ದಾಸ್ಯತೆಯ ಮನೋಭಾವ ಭಾರತೀಯರಲ್ಲಿ ಬೇರೂರಲು ಕಾರಣಕರ್ತರಾದರು. ಆಗ ಭಾರತದಿಂದ ಇಂಡಿಯಾದತ್ತ ಮನೋಭಾವ ಬದಲಾಯಿತು.

## ಸ್ವಾತಂತ್ರ್ಯ ಗಳಿಸಿದ 75 ವರ್ಷಗಳಲ್ಲಿ...

ಲಕ್ಷಾಂತರ ಭಾರತೀಯರ ಹೋರಾಟ, ಬಲಿದಾನ, ತ್ಯಾಗದ ಪ್ರತಿಫಲ ಬ್ರಿಟಿಷರಿಂದ ಭಾರತವನ್ನು ಮುಕ್ತಗೊಳಿಸುವಲ್ಲಿ ಯಶಸ್ವಿಯಾದೆವು. ಆದರೆ ವಿದೇಶಿಯ ಪ್ರಭಾವ ರಾಜಕೀಯ, ಸಾಮಾಜಿಕ, ಆರ್ಥಿಕ, ಮನೋಭಾವದಲ್ಲಿ ಮುಂದುವರೆಯಿತು. ರಾಜಕೀಯ ದಾಸ್ಯಕಿಂತಲೂ ಈ ಮಾನಸಿಕ ಗುಲಾಮಗಿರಿ ತುಂಬಾ ಅಪಾಯಕಾರಿಯಾಗಿತ್ತು. ಸ್ವಾತಂತ್ರ್ಯ ಗಳಿಸಿದ ಪ್ರಾರಂಭದಲ್ಲಿ ಪರಕೀಯ ಮನೋಭಾವದಿಂದ ಹೊರಬರುವುದು ಒಂದು ಸವಾಲಾಗಿತ್ತು. ಅನೇಕ ವಿಷಯಗಳಲ್ಲಿ ಈಗಲೂ ಅದನ್ನು ಕಾಣಬಹುದಾಗಿದೆ.

ಇವೆಲ್ಲವುಗಳ ಮಧ್ಯದಲ್ಲಿಯೂ ಭಾರತ ತನ್ನ ಸ್ವಂತಿಕೆಯ ನಿರಂತರ ಪ್ರಯತ್ನದಿಂದ ವಿಶ್ವದಲ್ಲಿ ಎದ್ದುನಿಲ್ಲುವ ಕಾಲ ಸನಿಹದಲ್ಲಿದೆ. ವಿಜ್ಞಾನ, ತಂತ್ರಜ್ಞಾನ, ಆರ್ಥಿಕತೆ, ಅಭಿವೃದ್ಧಿ, ಶಿಕ್ಷಣ, ವಿಶ್ವದ ವಿಶ್ವಾಸಾರ್ಹತೆಯಲ್ಲಿ ಭಾರತ ತನ್ನದೇಯಾದ ಪ್ರಗತಿ ಸಾಧಿಸುತ್ತಿದೆ. ಧನಾತ್ಮಕ ಯೋಚನೆಗಳಿಂದ ಭಾರತವನ್ನು ಪ್ರಪಂಚ ಎದುರು ನೋಡುತ್ತಿದೆ. ವಿಶ್ವಶಾಂತಿಗೆ ಭಾರತ ಮುಂದಾಳತ್ವ ವಹಿಸುತ್ತಿದೆ.

ಈ ದಿನಗಳಲ್ಲಿ ನಾವು ಗುಲಾಮಿ ಮನೋಭಾವದಿಂದ ಹೊರಬಂದು ಜಾತಿ, ಧರ್ಮದ ಸಂಕೋಲೆಗಳನ್ನು ಕಳಚಿ ಭಾರತವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಕಾಲಕ್ಕೆ ನಾವೆಲ್ಲ ಅಣಿಯಾಗುವ ಈ ಸಂಕ್ರಮಣ ಕಾಲದಲ್ಲಿ ನಮ್ಮ ನಾಗಾರಿಕತೆ, ನಮ್ಮ ಪರಂಪರೆ,

ಪುಟ 9 ಕ್ಕೆ ➢

# ಅಮೃತ ವಾಣಿ



**ಡಾ॥ ಟಿ. ಎನ್. ಲೋಕೇಶ್**
**ಮುಖ್ಯಸ್ಥರು & ಸಂಯೋಜನಾಧಿಕಾರಿಗಳು**
**'ಶಿಕ್ಷಣ ವಿಭಾಗ', NMKRV ಮಹಿಳಾ**
**ಕಾಲೇಜು, ಜಯನಗರ 3ನೇ ಬ್ಲಾಕ್, ಬೆಂಗಳೂರು**

## "ಅಮೃತ ಕಾಲಕ್ಕೆ ಶ್ರೀ ನರೇಂದ್ರ ಮೋದಿಯವರ ಮುನ್ನುಡಿ"...

ಆಗಸ್ಟ್ 15, 2022 ಭಾರತದ ಪಾಲಿಗೆ ಪವಿತ್ರ ದಿನ. ಇಂದಿಗೆ ಭಾರತ ಸ್ವಾತಂತ್ರ್ಯ ಗಳಿಸಿ 75 ಸಂವತ್ಸರಗಳು ಕಳೆದಿವೆ. ಆದ್ದರಿಂದ 'ಆಜಾದಿ ಕಾ ಅಮೃತ ಮಹೋತ್ಸವ' ದಿನ ಆಚರಣೆ ಕೇವಲ ಭಾರತದಲ್ಲಿ ಮಾತ್ರವಲ್ಲದೆ ಜಗತ್ತಿನ ಇತರೇ ರಾಷ್ಟ್ರಗಳಲ್ಲಿರುವ ಭಾರತೀಯ ಸಹ ಗರ್ವದಿಂದ ಆಚರಿಸಿದ್ದಾರೆ. ಈ ಸುಸಂದರ್ಭದಲ್ಲಿ ರಾಷ್ಟ್ರದ ಆದರಣೀಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ದೇಶವಾಸಿಗಳನ್ನು ಉದ್ದೇಶಿಸಿ ಮಾಡಿದ ದಿಕ್ಸೂಚಿ ಭಾಷಣ ಭವಿಷ್ಯದ ಅಭಿವೃದ್ಧಿ ಭಾರತದ ಚಿತ್ರಣವನ್ನು ಅನಾವರಣ ಮಾಡಿಸುವಂತಿತ್ತು. ಸ್ವಾತಂತ್ರ್ಯ ಅಮೃತಮಹೋತ್ಸವದ ಸಂದರ್ಭದಲ್ಲಿ ಪ್ರತಿಯೊಬ್ಬ ಭಾರತೀಯ ಹೊಸ ಸಂಕಲ್ಪ, ಹೊಸಶಕ್ತಿ ಹಾಗೂ ಹೊಸ ಹುರುಪಿನಿಂದ ಭವಿಷ್ಯದ ಅಭಿವೃದ್ಧಿ ಭಾರತದ ಮುನ್ನಡಿಗೆ ಭದ್ರ ಅಡಿಪಾಯ ಹಾಕಬೇಕೆಂದು ಕರೆಕೊಟ್ಟರು. ಈ ಸುಸಂದರ್ಭದಲ್ಲಿ ದೇಶವಾಸಿಗಳಿಗೆ ಐದು ದೃಢ ನಿಶ್ಚಯಗಳನ್ನು ಕೈಗೊಳ್ಳಲು ಹಾಗೂ ಅವುಗಳ ಸಾಕಾರಕ್ಕೆ ತಮ್ಮ ಜೀವಿತವನ್ನು ಮುಡುಪಿಟ್ಟು ಕರ್ತವ್ಯ ಪಥದಲ್ಲಿ ಸಾಗುವುದು ಅನಿವಾರ್ಯ ಎಂಬ ಆಶಯವನ್ನು ವ್ಯಕ್ತಪಡಿಸಿದರು. ರಾಷ್ಟ್ರ ನಿರ್ಮಾತೃಗಳಾದ ಶಿಕ್ಷಕರು ಸನ್ಮಾನ್ಯ ಪ್ರಧಾನಮಂತ್ರಿಗಳ ಆಶಯವನ್ನು ಸಾಕಾರಗೊಳಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಬೇಕಾಗಿದೆ. ಐದು ದೃಢ ನಿಶ್ಚಯಗಳು ಈ ಕೆಳಕಂಡಂತೆ ಇವೆ.

**ದೃಢನಿಶ್ಚಯ 01:** ಪ್ರತಿಯೊಬ್ಬ ದೇಶವಾಸಿಯು ಸಹ ಭಾರತದ ಅಭಿವೃದ್ಧಿಗೆ ನೆರವಾಗುವ ದೃಢ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಸ್ವಾತಂತ್ರ್ಯ ಹೋರಾಟಗಾರರು ಭಾರತಕ್ಕೆ ಸ್ವಾತಂತ್ರ್ಯಗಳಿಸಿಕೊಡುವ ದೃಢ ನಿಶ್ಚಯ ಮಾಡಿದ್ದರು. ಆದಕಾರಣ ಭಾರತ ಸ್ವಾತಂತ್ರ್ಯ ಗಳಿಸಲು ಸಾಧ್ಯವಾಯಿತು. ಈ ರೀತಿಯ ಜೀವಂತ ನಿದರ್ಶನದಿಂದ ಶಿಕ್ಷಕರಾದ ನಾವುಗಳು ಪ್ರೇರಣೆ ಪಡೆದು ವಿದ್ಯಾರ್ಥಿಗಳಲ್ಲಿ ಉತ್ಕೃಷ್ಟ ವ್ಯಕ್ತಿತ್ವದ ಅರಳುವಿಕೆಗೆ ಕಾರಣರಾಗಿ ಭವಿಷ್ಯದ ಅಭಿವೃದ್ಧಿ ಭಾರತದ ಕನಸನ್ನು ನನಸು ಮಾಡಬೇಕಾಗಿದೆ. 'ಮಕ್ಕಳನ್ನೇ ರಾಷ್ಟ್ರದ ಆಸ್ತಿ'ಗಳನ್ನಾಗಿ ಪರಿವರ್ತಿಸಬೇಕಾಗಿದೆ. ಮಕ್ಕಳ ವ್ಯಕ್ತಿತ್ವದಲ್ಲಿ ತ್ಯಾಗ, ಸೇವೆ, ನಿಸ್ವಾರ್ಥತೆ, ಪ್ರಮಾಣಿಕತೆ ಮುಂತಾದ ಮೌಲ್ಯಗಳ ವರ್ಧನೆಗೆ ನೆರವಾಗಬೇಕಾಗಿದೆ.

**ದೃಢನಿಶ್ಚಯ 02 :** ಎಲ್ಲಾ ದೇಶವಾಸಿಗಳು ಗುಲಾಮಿ ಮಾನಸಿಕತೆಯಿಂದ ಹೊರಬರಬೇಕು. ವಸಾಹಾತುಶಾಯಿ ಧೋರಣೆಯಿಂದ ಮುಕ್ತರಾಗುವ ದೃಢನಿಶ್ಚಯ ಮಾಡಬೇಕು. ಶಿಕ್ಷಕರಾದ ನಾವುಗಳ ನಮ್ಮ ವಿದ್ಯಾರ್ಥಿಗಳನ್ನು ಗುಲಾಮಿ ಮಾನಸಿಕತೆ ಹಾಗೂ ವಸಾಹತುಶಾಯಿ ಧೋರಣೆಗಳಿಂದ ಮುಕ್ತರಾಗಿಸಬೇಕು. ಸ್ವಾತಂತ್ರ್ಯ ಗಳಿಸಿ 75 ವರ್ಷಗಳಿದ್ದ ಬ್ರಿಟಿಷ್ ಶಿಕ್ಷಣ ವ್ಯವಸ್ಥೆಯನ್ನು ಕಿತ್ತೊಗೆದು, ಭಾರತೀಯ ಶಿಕ್ಷಣವನ್ನು ಸರ್ವರಿಗೂ ಸಿಗುವಂತೆ ಮಾಡುವ ಬಹು ದೊಡ್ಡ ಜವಾಬ್ದಾರಿ ನಮ್ಮ ಮೇಲಿದೆ. ಇಂಗ್ಲೀಷನ್ನು ಭಾಷೆಯಾಗಿ ಅಧ್ಯಯನ ಮಾಡಬೇಕೆ ಹೊರತು ಮಾಧ್ಯಮವಾಗಿ ಅಲ್ಲ. ಭಾರತದ ಎಲ್ಲಾ ಪ್ರಾದೇಶಿಕ ಭಾಷೆಗಳನ್ನು ಗೌರವಿಸಬೇಕು ಹಾಗೂ ಇಂತಹ ಎಲ್ಲಾ ಭಾಷೆಗಳನ್ನು ಜಗತ್ತಿಗೆ ನೀಡಿದ ಕೀರ್ತಿ ಭಾರತಕ್ಕೆ ಸಲ್ಲಬೇಕು.

**ದೃಢನಿಶ್ಚಯ 03:** ನಾವೆಲ್ಲರು ನಮ್ಮ ಪರಂಪರೆಯನ್ನು ಗೌರವಿಸುವುದರೊಂದಿಗೆ ಹೆಮ್ಮೆಯನ್ನು ಹೊಂದಬೇಕು. ಪರಿಸರದೊಂದಿಗೆ ಹೇಗೆ ಬದುಕಬೇಕೆಂಬ ಜ್ಞಾನವನ್ನು ನಮ್ಮ ಪೂರ್ವಿಕರು ನೀಡಿದ್ದಾರೆ. ಆದಕಾರಣ ಶಿಕ್ಷಕರಾದ ನಾವು ವಿದ್ಯಾರ್ಥಿಗಳಿಗೆ ಪರಿಸರದೊಂದಿಗೆ ಹೇಗೆ ಸಮನ್ವಯ ಸಾಧಿಸಬೇಕು ಎಂಬುದನ್ನು ಕಲಿಸಬೇಕಾಗಿದೆ. ನಾವು ಪ್ರಕೃತಿಯ ಯಜಮಾನರಲ್ಲ, ಅದರ ಒಂದು ಭಾಗ ಮಾತ್ರ ಎಂಬುದನ್ನು ಶಿಕ್ಷಣದ ಮೂಲಕ ಮನವರಿಕೆ ಮಾಡಿ, ವಿದ್ಯಾರ್ಥಿಯ ಬದುಕನ್ನು ಶ್ರೀಮಂತಗೊಳಿಸಬೇಕು. ಪ್ರಸಕ್ತ ಜಗತ್ತು ಪರಿಸರ ವೈಪರಿತ್ಯವಾದ 'ಭೂತಾಪ ಏರಿಕೆ' ಹಾಗೂ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಪರಿಹಾರ ಹುಡುಕುತ್ತಿದೆ. ಆದರೆ ಇಂತಹ ಸಮಸ್ಯೆಗಳಿಗೆ ನಮ್ಮ ಪೂರ್ವಿಕರು ಅನಾದಿ ಕಾಲದಲ್ಲೇ ಪರಿಹಾರ ಸೂಚಿಸಿದ್ದಾರೆ ಎಂಬ ಅರಿವನ್ನು ನಮ್ಮ ಮಕ್ಕಳಲ್ಲಿ ಉಂಟು ಮಾಡಬೇಕಾಗಿದೆ.

**ದೃಢ ನಿಶ್ಚಯ 4 :** 'ಒಗ್ಗಟ್ಟಿನಲ್ಲಿ ಏಕತೆ' ಎಂಬ ಮಂತ್ರವನ್ನು ಸಾಕಾರಗೊಳಿಸಬೇಕು. ಆಗ ಮಾತ್ರ ರಾಷ್ಟ್ರದ ಅಭಿವೃದ್ಧಿ ಸಾಧ್ಯ. **'ಒಗ್ಗಟ್ಟಿನಲ್ಲಿ ಏಕತೆ, ಏಕತೆಯಲ್ಲಿ ಅಭಿವೃದ್ಧಿ'** ಎಂಬುದನ್ನು ವಿದ್ಯಾರ್ಥಿ ಸಮೂಹದಲ್ಲಿ ಮೂಡಿಸಬೇಕಾಗಿದೆ.

**ದೃಢ ನಿಶ್ಚಯ 5 :** ಸನ್ಮಾನ್ಯ ಪ್ರಧಾನಮಂತ್ರಿಗಳ ಆಶಯದಂತೆ ಪ್ರತಿಯೊಬ್ಬರು ತಮ್ಮ ಪಾಲಿನ ಕರ್ತವ್ಯವನ್ನು ಪಾಲಿಸಬೇಕು. ರಾಷ್ಟ್ರವನ್ನು ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತದಿಂದ ಬಿಡುಗಡೆಗೊಳಿಸಬೇಕು. ಮಹಿಳಾ ಸಬಲೀಕರಣ ಆಗಬೇಕು. ಕೋವಿಡ್–19 ರ ಲಸಿಕೆಯನ್ನು 200 ಕೋಟಿ ಶ್ರೀಸಾಮಾನ್ಯನಿಗೆ ತಲುಪಿಸಿದ್ದು ಭಾರತದ ಪಾಲಿಗೆ ಅತೀ ದೊಡ್ಡ ಮೈಲಿಗಲ್ಲು. ಲಕ್ಷಾಂತರ ಮನೆಗೆ ಕುಡಿಯುವ ನೀರು, ಎಥೆನಾಲ್ ಮಿಶ್ರಿತ ಇಂಧನ ಇವುಗಳಿಂದ ಭಾರತವು ಅಭಿವೃದ್ಧಿಯ ಪಥದತ್ತ ಸಾಗುತ್ತಿರುವುದು ಶ್ಲಾಘನೀಯ. ಇಂತಹ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸಿ ಅವರ ವ್ಯಕ್ತಿತ್ವವನ್ನು ಅರಳಿಸಿ, ದೇಶದ ಅಭಿವೃದ್ಧಿಗೆ ನೆರವಾಗುವುದು.

ಆಜಾದಿ ಕಾ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ದೇಶಕ್ಕಾಗಿ ತ್ಯಾಗ ಮತ್ತು ಬಲಿದಾನ ಮಾಡಿದ ಮಹಾಪುರುಷರಾದ ಭಗತ್‌ಸಿಂಗ್, ಸುಖದೇವ್, ರಾಜ್‌ಗುರು, ಚಂದ್ರಶೇಖರ್ ಆಜಾದ್, ರಾಂ ಪ್ರಸಾದ್ ಬಿಸ್ಮಿಲ್ಲಾ, ಅಲ್ಲೂರಿ ಸೀತಾರಾಂ ರಾಜು, ನಾರಾಯಣ ಗುರು, ಸ್ವಾಮಿ ವಿವೇಕಾನಂದ, ಮಹರ್ಷಿ ಅರಬಿಂದೋ, ಸಾವರ್ಕರ್, ಸುಭಾಷ್‌ಚಂದ್ರ ಬೋಸ್, ತಿಲಕರು, ಸೂರ್ಯಸೇನ್ ಇತ್ಯಾದಿ ಇವರ ಜೀವನ ಮತ್ತು ಸಾಧನೆಗಳನ್ನು ಮಕ್ಕಳಿಗೆ ತಲುಪಿಸುವ ಬಹುದೊಡ್ಡ ಹೊಣೆಗಾರಿಕೆ ಶಿಕ್ಷಕರ ಮೇಲಿದೆ. ಮುಂದಿನ 25 ವರ್ಷಗಳು ಭಾರತದ ಪಾಲಿಗೆ **'ಅಮೃತಕಾಲ'**. ಆದ್ದರಿಂದ ನಾವೆಲ್ಲ ಇಂದೇ ಈ ಐದು ದೃಢ ನಿಶ್ಚಯ ಕೈಗೊಂಡು ಕಾರ್ಯಪ್ರವೃತ್ತರಾಗೋಣ. ಭವ್ಯ ದಿವ್ಯ ಭಾರತದ ಹಿರಿಮೆ–ಗರಿಮೆಯನ್ನು ಉಚ್ಛ್ರಾಯ ಸ್ಥಿತಿಗೆ ತಲುಪಿಸೋಣ. ಇದೇ ನಮ್ಮ ಆದ್ಯ ಕರ್ತವ್ಯ ಎಂಬ ಕರ್ತವ್ಯ ಪಥದಲ್ಲಿ ಸಾಗೋಣ. ●

**ಕಷ್ಟಗಳು ಮನುಷ್ಯನ ಶತ್ರುಗಳಲ್ಲ.**



# ವೀರ ಸಾವರ್ಕರ್ ಎಂಬ ಕ್ರಾಂತಿಕಾರಿ ಸಮಾಜ ಸುಧಾರಕ

ಸುರೇಶ್ ಅವಧಾನಿ

ಸಾವರ್ಕರ್ ಅವರ ಕ್ರಾಂತಿಕಾರಿ ಮತ್ತು ದೂರಗಾಮಿ ದೃಷ್ಟಿಯ ವಿಚಾರಧಾರೆಗಳು ಹಲವಾರು ಇದ್ದು, ಈ ಅಂಶಗಳ ಬಗ್ಗೆ ನಾವು ಎಂದೂ ಬೆಳಕು ಚೆಲ್ಲಲೇ ಇಲ್ಲಾ, ಅವರು ಹಿಂದುತ್ವದ ಪ್ರತಿಪಾದಕರು ಎಂಬ ಒಂದೇ ವಿಚಾರವನ್ನು ಸದಾ ಮುನ್ನೆಲೆಗೆ ತಂದು, ಅದಕ್ಕೆ ರಾಜಕೀಯ ಬಣ್ಣಗಳನ್ನು ಲೇಪಿಸಿ ಆ ಮಹಾನ್ ದರ್ಶನಿಕರಿಗೆ ಅವಮಾನ ಎಸೆಗುವ ಹುನ್ನಾರಗಳು ನಡೆಯುತ್ತಿರುವುದು ಅತ್ಯಂತ ಬೇಸರದ ಸಂಗತಿ.

ಭಾರತದ ಇತಿಹಾಸದಲ್ಲಿ ಅತ್ಯಂತ ಪ್ರಭಾವಿ ವ್ಯಕ್ತಿಗಳಲ್ಲಿ ಒಬ್ಬರು ವೀರ್ ಸಾವರ್ಕರ್, ಅವರ ಸ್ವಾತಂತ್ರ್ಯ ಹೋರಾಟದ ಜೀವನ ಒಂದು ದಂತಕಥೆ ಎಂದರೆ ತಪ್ಪಾಗಲಾರದು. ಅವರು ಮಾಡಿದ ಮಹತ್ತರ ಕಾರ್ಯಗಳಲ್ಲಿ ಒಂದಾದ ಸಾಮಾಜಿಕ ಸುಧಾರಣೆಯ ಕೆಲಸ ಅತ್ಯಂತ ಕಡಿಮೆ ಚರ್ಚಿತ ವಿಷಯವಾಗಿದೆ. ವಿಶೇಷವಾಗಿ ಅವರು ಅಂದಿನ ದಿನಗಳಲ್ಲಿ ಸಮಾಜದಲ್ಲಿದ್ದ ಜಾತಿ ತಾರತಮ್ಯಗಳು, ಅಸ್ಪೃಶ್ಯತೆ ಇದರ ಬಗ್ಗೆ ಅವರು ಮಾಡಿದ ಅನನ್ಯವಾದ ಹೋರಾಟದ ಬಗ್ಗೆ ಅರಿಯೋಣ ಬನ್ನಿ.

ಸುಮಾರು 15 ವರ್ಷಗಳ ಕಾಲ ಚಿತ್ರ ಹಿಂಸೆಯನ್ನು ಅಂಡಮಾನ್ ಜೈಲಿನಲ್ಲಿ ಅನುಭವಿಸಿ ಬಿಡುಗಡೆಗೊಂಡ ನಂತರ ಸಾವರ್ಕರ್ ಸಮಾಜ ಸುಧಾರಣೆಯ ದಿಕ್ಕಿನಲ್ಲಿ ತಮ್ಮ ಕೆಲಸವನ್ನು ಪ್ರಾರಂಭಿಸಿದರು. ಅವರು ಸಮಾಜವನ್ನು ಒಡೆಯುವಂತಹ ಜಾತಿ ತಾರತಮ್ಯವನ್ನು ಉಂಟುಮಾಡುವಂತಹ ಪದ್ಧತಿಗಳನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ತಮ್ಮ ಗಮನ ಹರಿಸಿದರು.

ನುಡಿದಂತೆ ನಡೆಯಬೇಕು ತಾನು ಹೇಳಿದ್ದು ಮೊದಲು ತನಗೆ ಅನ್ವಯ ಅನ್ನುವುದು ಅವರ ವಾದ, ಹಾಗಾಗಿ ಅವರು ಎಂದೂ ಸಹ ತಮ್ಮ ಜೀವನದಲ್ಲಿ ಜಾತಿ ತಾರತಮ್ಯ ಮೇಲ್ಜಾತಿ, ಕೀಳ್ಜಾತಿ ಎಂಬ ಭೇದ ಮಾಡಲಿಲ್ಲ, ಜಾತಿ ಪದ್ಧತಿಯ ಕಡು ವಿರೋಧಿಯಾಗಿದ್ದರು ಸಾವರ್ಕರ್. ಶೋಷಿತ ವರ್ಗದ ಮಕ್ಕಳು ಶಿಕ್ಷಣ ಕಡ್ಡಾಯವಾಗಿ ಪಡೆಯಬೇಕು ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು, ಆ ನಿಟ್ಟಿನಲ್ಲಿ ಅವರು ಬಡವರಿಗೆ ಆರ್ಥಿಕ ಸಹಾಯ, ಮಕ್ಕಳಿಗೆ ಬಳಪ ಮತ್ತು ಸ್ಲೇಟ್ ನೀಡುತ್ತಿದ್ದರು, ಈ ಶೋಷಿತ ವರ್ಗದ ಮಕ್ಕಳೆಲ್ಲರು ಶಾಲೆಗೆ ಹೋಗುವಂತೆ ನೋಡಿಕೊಳ್ಳುತ್ತಿದ್ದರು. ಅಂದಿನ ಬ್ರಿಟಿಷ್ ಕಂಪನಿ ಸರ್ಕಾರ ಕೆಳ ವರ್ಗದ ಮಕ್ಕಳಿಗೆ ಪ್ರತ್ಯೇಕ ಶಾಲೆ ನಡೆಸುತ್ತಿದ್ದ ಬಗ್ಗೆ ಅವರಿಗೆ ಭಾರಿ ವಿರೋಧವಿತ್ತು, ಎಲ್ಲಾ ಮಕ್ಕಳು ಒಂದೇ ಶಾಲೆಯಲ್ಲಿ ಓದಬೇಕು ಎಂಬುದು ಅವರ ಪಟ್ಟು, ಇಲ್ಲವಾದಲ್ಲಿ ಶೋಷಿತ ಹಿಂದುಳಿದ ಜಾತಿಯ ಮಕ್ಕಳಲ್ಲಿ ಶಾಶ್ವತವಾದ ಕೀಳರಿಮೆ ಉಂಟಾಗುತ್ತದೆ ಎಂಬುದು ಅವರ ವಾದವಾಗಿತ್ತು.

ದಸರಾ, ಸಂಕ್ರಾತಿ ಹೀಗೆ ಹಬ್ಬ-ಹರಿದಿನಗಳಂದು ಅವರು ಕೆಳವರ್ಗದ ಕೇರಿಗೆ ಭೇಟಿ ಕೊಟ್ಟು, ತಮ್ಮ ಜೊತೆ ಎಲ್ಲ ವರ್ಗದವರನ್ನು ಕರೆದೊಯ್ದು ಸಿಹಿ ಹಂಚುತ್ತಿದ್ದರು. ಎಲ್ಲರ ಜೊತೆ ಬೆರೆತು ಭೋಜನ ಸೇವಿಸುತ್ತಿದ್ದರು. ಒಬ್ಬ ದಲಿತ ಹೆಣ್ಣು ಮಗಳನ್ನು ಸಾವರ್ಕರ್ ದತ್ತು ಪಡೆದು ಬೆಳೆಸಿದರು. ದಲಿತ ಸಮಾಜ ಸುಶಿಕ್ಷಿತರಾಗಬೇಕು ಎಂಬ ಹಂಬಲ ಅವರಿಗಿತ್ತು, ಅಷ್ಟೇ ಅಲ್ಲ, ಎಲ್ಲಾ ದಲಿತ ಮಕ್ಕಳಿಗೂ ಗಾಯತ್ರಿ ಮಂತ್ರ ಪಠನೆಯನ್ನು ಮಾಡಿಸುತ್ತಿದ್ದರು.

1930ರಲ್ಲಿ ಭಾರತದ ಉದ್ದಗಲಕ್ಕು ಗಣೇಶೋತ್ಸವವನ್ನು ಸಾವರ್ಕರ್ ಪ್ರಾರಂಭಿಸಿದರು, ಅದರಲ್ಲಿ ಶೋಷಿತ ಹಿಂದುಳಿದ ವರ್ಗದವರಿಂದಲೇ ಮೊದಲು ಭಜನೆ, ಅವರಿಗೆಲ್ಲ ಭಜನೆಯ ವೇಳೆಯಲ್ಲಿ ಹೂವಿನ ಮಾಲೆಯನ್ನು ಹಾಕಿ ಗೌರವ ಸಮರ್ಪಣೆ ಮಾಡಲಾಗುತ್ತಿತ್ತು. ಹಬ್ಬದ ಸಂದರ್ಭದಲ್ಲಿ ಎಲ್ಲ ವರ್ಗದ ಜನ ಒಟ್ಟಿಗೆ ಸೇರಿ ಪ್ರಸಾದ ಭೋಜನವನ್ನು ಪಂಕ್ತಿ ಭೇದ ಮಾಡದೆ ಸ್ವೀಕರಿಸುತ್ತಿದ್ದರು.

1931ರಲ್ಲಿ ರತ್ನಗಿರಿ ಜಿಲ್ಲೆಯಲ್ಲಿ ಪತೀತಪಾವನ ಮಂದಿರವನ್ನು ಸ್ಥಾಪಿಸಿ ಎಲ್ಲ ವರ್ಗದ ಜನರಿಗೆ ಇಲ್ಲಿ ಪೂಜೆ ಸಲ್ಲಿಸುವ ಮುಕ್ತ ಅವಕಾಶ ನೀಡಲಾಗಿತ್ತು, ಇಲ್ಲಿ ಮಹಿಳೆಯರಿಗೆ ಸಮುದಾಯ ಭೋಜನ ನೀಡಲಾಗುತ್ತಿತ್ತು, ಸೆಪ್ಟೆಂಬರ್ 21, 1931ರಂದು ಪ್ರಾರಂಭವಾದ ಈ ಭೋಜನಕ್ಕೆ ಮೊದಲು 75 ಮಹಿಳೆಯರು ಇದ್ದರು, 1935ರ ಹೊತ್ತಿಗೆ ಆ ಸಂಖ್ಯೆ 400 ದಾಟಿತ್ತು.

ಸಾವರ್ಕರ್ ಅವರಿಗೆ ಜಾತಿಯನ್ನು ಹುಟ್ಟಿನಿಂದ ನಿರ್ಧರಿಸುವ ಬಗ್ಗೆ ಭಾರಿ ವಿರೋಧವಿತ್ತು, ಈ ವ್ಯವಸ್ಥೆ ಅತ್ಯಂತ ಕ್ರೂರ ಮತ್ತು ದೇಶಕ್ಕೆ ಮಾರಕ ಎನ್ನುವುದು ಅವರ ಅಭಿಪ್ರಾಯವಾಗಿತ್ತು. ತಮ್ಮ ತಮ್ಮನಾದ ನಾರಾಯಣ ಸಾವರ್ಕರ್‌ಗೆ ಬರೆದ ಪತ್ರದಲ್ಲಿ "ನಾವು ಬ್ರಿಟಿಷ್ ವಿರುದ್ಧ ಹೋರಾಡುವುದು ಎಷ್ಟು ಮುಖ್ಯನೋ, ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆಯ ವಿರುದ್ಧ ಹೋರಾಡುವುದು ಅಷ್ಟೇ ಮುಖ್ಯ" ಎಂದು ನುಡಿದಿದ್ದರು.

1931ರಲ್ಲಿ ದಲಿತರ ದೇವಸ್ಥಾನದ ಪ್ರವೇಶದ ಬಗ್ಗೆ ಮರಾಠಿಯಲ್ಲಿ ಒಂದು ಕವನ ಬರೆಯುತ್ತಾರೆ " ಮಲಾ ದೇವಾಚೆ ದರ್ಶನ್ ಘೆಯು ದ್ಯಾ" – ಭಗವಂತನನ್ನು ಅವನ ಸನ್ನಿಧಿಯಲ್ಲಿ ಕಾಣುವ ಎಂದು ಅದರ ಅರ್ಥ, ಆ ಸಂದರ್ಭದಲ್ಲಿ ಅವರ ಕಣ್ಣುತುಂಬಿ ಬರುತ್ತದೆ.

ವಿನಾಯಕ ದಾಮೋದರ ಸಾವರ್ಕರ್ ಎಂಬ ಮಹಾನ್ ಕ್ರಾಂತಿಕಾರಿ ಸಮಾಜ ಸುಧಾರಕ ಮತ್ತು ದಾರ್ಶನಿಕನ ಜೀವನ ಕುರಿತು ಅರಿತುಕೊಳ್ಳಬೇಕಾದ ಹಲವಾರು ಆಯಾಮಗಳಿವೆ, ಅವರು ಹಿಂದುತ್ವದ ಪ್ರತಿಪಾದಕರಾಗಿದ್ದರು ಎನ್ನುವುದು ಅವರ ಜೀವನದ ಒಂದು ಅಂಶವಷ್ಟೇ.

ಗ್ರಂಥಋಣ – ಸಮಗ್ರ ಸಾವರ್ಕರ್ ವಾಂಗ್ಮಯ್

# ಗಣಿತ – ಕಬ್ಬಿಣದ ಕಡಲೆ ಏಕೆ?

**ಶ್ರೀಮತಿ ಲಕ್ಷ್ಮೀಸಿಂಗ್ ಬಿ.**
**ಶೈಕ್ಷಣಿಕ ಸಮಾಲೋಚಕರು, ಲೈಫ್‌ಕೋಚ್**
**ಸಂಪನ್ಮೂಲ ವ್ಯಕ್ತಿ (ಗಣಿತ), ಗಂಗಾನಗರ,**
**ಬೆಂಗಳೂರು –560 032**
**ದೂರವಾಣಿ ಸಂಖ್ಯೆ: 9980033636**



ಗಣಿತ ಎಂದರೆ ಕಬ್ಬಿಣದ ಕಡಲೆ – ಈ ಮಾತನ್ನು ನಾವೆಲ್ಲರೂ ಬಹಳ ಹಿಂದಿನಿಂದಲೂ ಕೇಳಿಕೊಂಡು ಬರುತ್ತಿದ್ದೇವೆ. ಸಮಸ್ಯೆಗಳನ್ನು ಬಿಡಿಸುವುದೇ ಬಹು ದೊಡ್ಡ ಸಮಸ್ಯೆಯಾಗಿದೆ.

"Math's is king of all the subjects" ಇದನ್ನು ಗಣಿತ ಶಿಕ್ಷಕರೆಲ್ಲಾ ಬಹಳ ಹೆಮ್ಮೆಯಿಂದ ಹೇಳುತ್ತಾರೆ. ಈ ಅವರ ಹೆಮ್ಮೆಯೇ ಮಕ್ಕಳಿಗೆ ಗಣಿತ ಕಬ್ಬಿಣದ ಕಡಲೆಯಾಗುವುದಕ್ಕೆ ಕಾರಣವಾಯಿತೋ ಏನೋ ಎಂದು ಕೆಲವೊಮ್ಮೆ ಅನ್ನಿಸುತ್ತದೆ. ಗಣಿತ ಕಬ್ಬಿಣದ ಕಡಲೆ ಹೌದು. ಆದರೆ ಅದನ್ನು ಹದವಾಗಿ ಕಾಯಿಸಿ ತಮಗೆ ಹೇಗೆ ಬೇಕೋ ಹಾಗೆ ಮಕ್ಕಳಲ್ಲಿ ಎರಕ ಹೊಯ್ಯುವುದು ಗಣಿತ ಶಿಕ್ಷಕರ ಕೈಯಲ್ಲೇ ಇದೆ. ಇದನ್ನು ಖಂಡಿತಾ ಮಾಡಬಹುದು.

ಗಣಿತ ಶಿಕ್ಷಕರು ಕಲಿಸುವ ಶೈಲಿ, ಕುಶಲತೆ ಅಥವಾ ಕೌಶಲ್ಯದ ಗುಣಮಟ್ಟ, ಜ್ಞಾನದ ಮತ್ತು ತಿಳುವಳಿಕೆಯ ಕೊರತೆ, ಇನ್ನೂ ಮುಂತಾದ ಕಾರಣಗಳಿಂದಾಗಿ ಪ್ರಾಥಮಿಕ ಹಂತದಿಂದಲೇ ಹಂತ ಹಂತವಾಗಿ ಗಣಿತ ಕ್ಲಿಷ್ಟಕರವಾಗುತ್ತಾ ಬಾಕಿ ಎಲ್ಲಾ ವಿಷಯಗಳಿಗಿಂತ ಕಠಿಣವಾಗಿ ಮಾರ್ಪಾಡಾಗಿ ನಂತರ ಬೋರ್ಡ್ ಪರೀಕ್ಷೆಯ ಫಲಿತಾಂಶದ ರುವಾರಿಯೇ ಆಗಿ ಬಿಡುತ್ತದೆ. ಮಕ್ಕಳ ಮತ್ತು ಶಾಲೆಯ ಒಟ್ಟಾರೆ ಫಲಿತಾಂಶ ಗಣಿತದ ಮೇಲೆಯೇ ನಿಲ್ಲುವಂತಾಗುತ್ತದೆ. ಮಕ್ಕಳಿಗೆ, ಗಣಿತವನ್ನು ಪ್ರಾರಂಭಿಕ ಹಂತದಿಂದಲೇ ಸರಿಯಾದ ರೀತಿಯಲ್ಲಿ ಕಲಿಸಲು ಪ್ರಯತ್ನಿಸಬೇಕು.

"We can't build a great building on a weak foundation" ನಿಜ ಅಲ್ಲವೇ? ಪ್ರಾಥಮಿಕ ಹಂತದಿಂದಲೇ ಮಕ್ಕಳಲ್ಲಿ ಬೇಸಿಕ್ ಮ್ಯಾತ್ಸ್ (ಮೂಲ ಗಣಿತ) ನ ಗಟ್ಟಿಯಾದ ತಳಪಾಯ ಹಾಕಿದರೆ ಮುಂದೆ ಅವರಾಗೇ ಗಣಿತದ ತತ್ವಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಮಕ್ಕಳು ಕೇಳಿ ತಿಳಿಯುವುದಕ್ಕಿಂತ ನೋಡಿ ಕಲಿಯುವುದು ಹೆಚ್ಚು. ಕೇವಲ ಚಾಕ್–ಪೀಸ್ ಮತ್ತು ಬೋರ್ಡ್‌ನಿಂದ ಕಲಿಸದೆ, ಚಟುವಟಿಕೆಗಳು, ಕ್ವಿಜ್‌ಗಳು ಅಥವಾ ಕೌಶಲ್ಯಗಳ ಮೂಲಕ ಕಲಿಸಬೇಕು. ವೇದ ಗಣಿತ ಮತ್ತು ಅಬಾಕಸ್‌ಗಳನ್ನು ಪ್ರಾರಂಭಿಕ ಹಂತದಿಂದಲೇ ಅಳವಡಿಸಿಕೊಂಡರೆ, ಗಣಿತದಲ್ಲಿ ಆಸಕ್ತಿ ಮತ್ತು ಏಕಾಗ್ರತೆ ಹೆಚ್ಚಾಗುತ್ತದೆ. ಮುಖ್ಯವಾಗಿ ಶಿಕ್ಷಕರು, ಮಕ್ಕಳ ಲೆವೆಲ್‌ಗೆ ಇಳಿದರೆ ಮಾತ್ರ. ಅವರ ಕಲಿಕಾ ಸಮಸ್ಯೆಗಳು ಅರ್ಥವಾಗುತ್ತದೆ. ಪರಿಹಾರಗಳು ಸುಲಭ ಸಾಧ್ಯವಾಗುತ್ತದೆ.

ತಂತ್ರಜ್ಞಾನ ಅಥವಾ ಕಂಪ್ಯೂಟರ್‌ಗಳ ಸಹಾಯದಿಂದ ಗಣಿತ ಜ್ಞಾನವನ್ನು ಗರಿಷ್ಠಮಟ್ಟದಲ್ಲಿ ಕಲಿಯಲು ಸಾಧ್ಯವಿಲ್ಲ. "Thousands of computers cannot replace one outstanding teacher" ಇದು ಅಕ್ಷರಶಃ ಸತ್ಯ. ಮಕ್ಕಳು ಕೇಳುವ ಎಲ್ಲಾ ಪ್ರಶ್ನೆಗಳಿಗೆ ಸಮಾಧಾನದಿಂದ ಉತ್ತರಿಸಬೇಕು. ಕಲಿಸುವ ವಾತಾವರಣ ಸೌಹಾರ್ದಯುತವಾಗಿರಬೇಕು. ಕೇವಲ ಸಿಲಬಸ್ ಮುಗಿದರೆ ಸಾಕೆಂದು ಪಾಠ ಮಾಡದೇ ಕಲಿಸುವತ್ತಾ ಗುರಿ ಇರಬೇಕು. ಶಿಕ್ಷಕವೃತ್ತಿ ಜವಾಬ್ದಾರಿಯ ವೃತ್ತಿ.

"without calculations we can't do any business or anything" ಗಣಿತ ಹೇಗೆ ಎಲ್ಲರ ನಿತ್ಯ ಜೀವನದಲ್ಲಿ ಹಾಸು ಹೊಕ್ಕಾಗಿದೆ ಎಂಬುದರ ಅರಿವನ್ನು ಮಕ್ಕಳಲ್ಲಿ ಮೂಡಿಸಬೇಕು. Equations , formulas ಅಥವಾ theoremsಗಳನ್ನು ನಿಜ ಜೀವನದಲ್ಲಿ ಎಲ್ಲಿ ಹೇಗೆ ಉಪಯೋಗಕ್ಕೆ ಬರುತ್ತದೆ ಎಂಬುದನ್ನು ಉದಾಹರಣೆಗಳ ಮೂಲಕ ವಿವರಿಸಿದರೆ ಮಕ್ಕಳಿಗೆ, ಗಣಿತದ ಮಹತ್ವ ಅರಿವಿಗೆ ಬರುತ್ತದೆ.

**ಕೆಲವೊಂದು ಉದಾಹರಣೆಗಳನ್ನು ಹೀಗೆ ಕೊಡಬಹುದು**

1. Trigonometry ಮತ್ತು calculus ಕಲಿಯುವುದರಿಂದ ತಾಜ್‌ಮಹಲ್, ಪಿರಮಿಡ್‌ಗಳು, ಸೇತುವೆಗಳು, ದಾರಿದೀಪಗಳು ಮತ್ತು ಭೂಮಿಯ ಕೆಳಗಡೆ ವಿದ್ಯುತ್ ಕೇಬಲ್‌ಗಳು, ನೀರಿನ ಪೈಪುಗಳು ಮುಂತಾದವುಗಳನ್ನು ಭದ್ರವಾಗಿ ಕಟ್ಟುವುದಕ್ಕೆ ಮತ್ತು ಅಳವಡಿಸುವುದಕ್ಕೆ ಸಾಧ್ಯವಾಗುವುದು.
2. ಹಣದುಬ್ಬರ, ಜನಗಣತಿ, ಉಳಿಕೆ, ಗಳಿಕೆಗಳನ್ನು ಕರಾರುವಕ್ಕಾಗಿ ಲೆಕ್ಕ ಹಾಕುವುದಕ್ಕೆ 'ಡೇಟಾ ಹ್ಯಾಂಡಲಿಂಗ್' ಕಲಿಯುವುದರಿಂದ ಉಪಯೋಗವಿದೆ.
3. ಲೊಕೇಷನ್‌ಗಳನ್ನು ಪತ್ತೆ ಹಚ್ಚುವುದರಲ್ಲಿ, ಕುಳಿತಲ್ಲೆ ಪ್ರಪಂಚದ ಆಗು ಹೋಗುಗಳನ್ನು ತಿಳಿಯುವುದಕ್ಕೆ ಗಣಿತ ಬಹು ಮುಖ್ಯವಾಗಿ ಬೇಕಾಗುತ್ತದೆ.
4. ವಿಶ್ರಾಂತಿ ಇಲ್ಲದಂತೆ ಕೆಲಸ ಮಾಡುವ ರೊಬೋಟ್‌ಗಳು ಕಂಪ್ಯೂಟರ್ ಗ್ರಾಫಿಕ್ಸ್ ಮತ್ತು ಅನಿಮೇಶನ್‌ಗಳನ್ನು ಮಾಡುವುದಕ್ಕೆ ಗಣಿತ ಕಲಿಯುವುದರಿಂದ ಸಾಧ್ಯವಾಗುವುದು.
5. ವಿಜ್ಞಾನವೆಂದರೆ ಕೂಡ ಗಣಿತವೇ. ಗಣಿತವಿಲ್ಲದೆ ವಿಜ್ಞಾನವಿಲ್ಲ.

ಒಟ್ಟಿನಲ್ಲಿ, ಗಣಿತ ಎಲ್ಲಾ ಕಡೆ ಗಾಳಿಯ ಹಾಗೆ ಹರಡಿದೆ. ಗಣಿತ ಪ್ರಾಪಂಚಿಕ ಭಾಷೆಯಾಗಿದೆ. ಹಾಗಾಗಿ, ಮಕ್ಕಳನ್ನು ಕೇವಲ ಅಂಕ ಗಳಿಸುವ ಯಂತ್ರಗಳನ್ನಾಗಿ ಮಾಡದೆ ಜ್ಞಾನ ಸಂಪಾದನೆಯ ಕಡೆಗೆ ಸೆಳೆಯಬೇಕು. ಮಾದರಿ ಶಿಕ್ಷಕರಾಗಬೇಕು. ಗಣಿತ ಎಷ್ಟು ಮುಖ್ಯ ಎಂದು ಹೇಳುತ್ತೇವೆಯೋ ಹಾಗೆಯೇ ಗಣಿತ ತುಂಬಾ ಸರಳ ಮತ್ತು ಸುಂದರ ಎಂಬ ಚಿತ್ರಣವನ್ನು ಮಕ್ಕಳ ಮನಸ್ಸಿನಲ್ಲಿ ತುಂಬಬೇಕು. ಮೆಶಿನ್‌ಗಳನ್ನು ತಯಾರು ಮಾಡುವುದಲ್ಲ, ತಯಾರು ಮಾಡುವುದು ಹೇಗೆ ಎಂಬುದನ್ನು ಕಲಿಸಬೇಕು. ಇದು ಶಿಕ್ಷಕರ ಆದ್ಯ ಕರ್ತವ್ಯವಾಗಿದೆ.

**ಗಣಿತ ಶಿಕ್ಷಕರಿಗೆ ಕೆಲವೊಂದು ಟಿಪ್ಸ್‌ಗಳು ಹೀಗಿವೆ.**

1. ಮಕ್ಕಳನ್ನು ಮೊದಲು ಗಣಿತದ ಬಗ್ಗೆ ಕಂಫರ್ಟ್ ಮತ್ತು Confident Level ಗೆ ತರಬೇಕು.
2. ಪ್ರಶ್ನೆಗಳಿಂದಲೇ ಪಾಠ ಶುರು ಮಾಡಬೇಕು.
3. ಮಕ್ಕಳ ಐಡಿಯಾಗಳಿಗೆ ಸ್ಪಂದಿಸಬೇಕು.
4. ಮಕ್ಕಳಿಗೆ ಕಲಿಯಲು ಸಮಯ ಕೊಡಬೇಕು.
5. ಮಕ್ಕಳಿಗೆ ಗೊಂದಲ ಉಂಟಾಗದಂತೆ ಜಾಗ್ರತೆ ವಹಿಸಬೇಕು.
6. ಶಿಕ್ಷಕರು ಉತ್ತರದ ಕೀಗಳಲ್ಲ ಎಂಬುದನ್ನು ಮನದಟ್ಟು ಮಾಡಿಸಬೇಕು.
7. 'Not knowing is not failure' ಎಂಬುದನ್ನು ತಿಳಿಸಬೇಕು.

ಕೊನೆಯದಾಗಿ, ಪ್ರತಿಶಾಲೆಯಲ್ಲಿಯೂ, ಗಣಿತಜ್ಞರ ಸಾಧನೆಗಳು ಮತ್ತು ಗಣಿತದ ವಿವಿಧ ಮಾದರಿಗಳು ಇರುವಂತೆ ಗಣಿತದ ಲ್ಯಾಬೋರೇಟರಿ ಇದ್ದರೆ ಬಹಳ ಉತ್ತಮ. ಆಗ ಗಣಿತ ಕಬ್ಬಿಣದ ಕಡಲೆ ಆಗದೆ, ಸರಳ ಸುಂದರವಾಗುವುದರಲ್ಲಿ ಸಂಶಯವೇ ಇಲ್ಲಾ! ಶಿಕ್ಷಕ ವೃತ್ತಿ

'Math's is an adventure" Math's is life

"Thinking capacity is increases by learning & doing math's".

●

# ಪ್ರಕೃತಿ

ಶ್ರೀಮತಿ ಕವಿತಾ ಕುಲಕರ್ಣಿ
ಬೆಂಗಳೂರು

"ಪ್ರಕೃತಿ ಮನುಷ್ಯನ ಅವಶ್ಯಕತೆಗಳನ್ನು ಪೂರೈಸುತ್ತದೆ;
ದುರಾಸೆಗಳನ್ನಲ್ಲ" –ಮಹಾತ್ಮ ಗಾಂಧೀ

**ಭೂತಾಯಿ, ಜಗಜ್ಜನನಿ ಈಕೆ**
**ಜೀವರಾಶಿಗಳ ಸೃಷ್ಟಿ ಅವಳ ಧರ್ಮ**
**ಸಂರಕ್ಷಿಸುವುದು ಮಾನವ ಧರ್ಮ**
**ಜಲ, ಮೃಗ, ವೃಕ್ಷ ಸಂಪನ್ಮೂಲಗಳ ದಾತೆ**
**ಪ್ರಕೃತಿ ಎಂದೂ ಅವಳ ಅಧೀನ**
**ವಿಜ್ಞಾನವೂ ಸೃಷ್ಟಿಯ ಸ್ವಾಧೀನ**
**ಮರುಕಳಿಸಿತು ಮತ್ತೊಮ್ಮೆ**
**ಬೊಬ್ಬರಿಯುತ ಪ್ರಕೋಪತೆ**
**ವಿನಾಶ ಸೂಚಿಸಿದ ವಿಕೋಪತೆ**
**ಪ್ರಕೃತಿ ಅಟ್ಟಹಾಸದಲಿ ಮೆರೆಯಲು**
**ವರುಣನ ಪ್ರತಾಪ ಅರ್ಭಟಿಸಲು**

**ತತ್ತರಿಸಿತು ಜಲಾವೃತ ನೆಲವು**
**ಭವನಗಳಡಿಯಲಿ ಹೊತ್ತು ಬತ್ತಿರುವ**
**ಕೆರೆತೊರೆಗಳು ಭೋರ್ಗರೆಯುತ್ತಿವೆ**
**ತಮ್ಮ ಸ್ಥಾನವೆಲ್ಲೆಂದು ನುಸುಳುತ್ತಿವೆ**
**ದಿಗ್ಭ್ರಮೆ ಮೂಡಿಸಿದೆ, ಆತಂಕಗೊಳಿಸಿದೆ**
**'ಪ್ರಳಯ'ವೆಂಬ ಭಯಂಕರತೆಯ**
**ಸ್ವಲ್ಪ ಪರಿಚಯಿಸುತ**
**ಜಲ ದಿಗ್ಬಂಧನದಲಿ ಹುದುಗಿ**
**ಕಂಠಮಟ್ಟ ಜಲಮಯದಿ ಸಿಲುಕಿದ್ದರೂ**
**ದಾಹವಾರಿಸಲು ನೀರಿಲ್ಲದ ದಯನೀಯತೆ**
**ಕೃತ್ರಿಮತೆಯ ಅಳವಡಿಕೆಯ ದಾಸನಾಗಿ**

**ತಾಂತ್ರಿಕ ಆಧುನಿಕ ಗೋಚರ ಶಕ್ತಿಯಿದ್ದರೂ**
**ಉಡಲು ಉಣ್ಣಲು ಪರಾಧೀನತೆ**
**ಕೆರೆ– ಕಾಲುವೆಗಳ ಸಹಜತೆಯ ಕೆಣಕಿ**
**ದುರಾಸೆಯಲಿ ಆಷೋಷನ ಗೈದ**
**'ಮೇಧಾವಿ' ಎಂಬ ಈ ಅಲ್ಪಮತಿ**
**ಕಾಂಕ್ರೀಟು ಕಟ್ಟಡಗಳ ಉದರವ**
**ಸೀಳುತ ಬಿರಿದು ಹರಿದಿದೆ ಜಲ**
**ತನ್ನ ಪ್ರಬಲತೆಯ ಸಾರುತ**
**ನಿಸರ್ಗ ಸವಾಲೆಸೆದಿದೆ ಈ**
**ದುರ್ದಶೆಗೆ ಕಾರಣರ್ಯಾರು ಎಂದಿದೆ**
**ಭೂತ, ಭವಿಷ್ಯಗಳ ಅಂಕೆ ಮೀರಿದೆ**

ಪ್ರಕೃತಿ ಸೃಷ್ಟಿಯ ಮೂಲ. ಭೂಮಿ, ಆಕಾಶ, ವಾಯು, ಜಲ, ಅಗ್ನಿ– ಈ ಪಂಚಭೂತಗಳೇ ಸೃಷ್ಟಿಗೆ ಕಾರಣ. ಸ್ವಾಭಾವಿಕವಾದ ನೈಜ ಸಂಪನ್ಮೂಲಗಳಾದ ನಮ್ಮ ಪ್ರಕೃತಿ, ನಮ್ಮ ಪರಿಸರ ಇವು ದೈವದತ್ತವಾದ ಕೊಡುಗೆ. ನೆಲ, ಜಲ (ನದಿ ಸರೋವರಗಳು), ಅರಣ್ಯಗಳು (ಗಿಡ ಮರಗಳು), ಗುಡ್ಡ, ಬೆಟ್ಟ, ಪರ್ವತಗಳನ್ನು ಹೊತ್ತ ಭುವಿಯೊಂದು ಸುಂದರವಾದ ಆಸರೆಯ ಧಾಮ.

ಇಂತಹ ಸ್ವಾಭಾವಿಕವಾದ ಸಂಪನ್ಮೂಲಗಳನ್ನು ಹೊಂದಿರುವ ನಮ್ಮ ಪರಿಸರ ಎಲ್ಲ ಜೀವರಾಶಿಗಳಿಗೂ ಅವಶ್ಯಕ. ಜೀವರಾಶಿಗಳಲ್ಲೆಲ್ಲ ಅತ್ಯಂತ ಉನ್ನತವಾದ ಜೀವಿ ಮಾನವ. ಮೇಧಾವಿ ಎನಿಸಿರುವ ಮಾನವ ಇಂದು ತನ್ನ ಸ್ವಾರ್ಥಕ್ಕಾಗಿ ಪ್ರಕೃತಿ ಧರ್ಮದಿಂದ ಬಾಳುತ್ತಿರುವ ಇತರ ಜೀವರಾಶಿಗಳನ್ನು ತನ್ನ ಸ್ವಾಧೀನ ಪಡೆಸಿಕೊಂಡಿರುವುದು ವಿಪರ್ಯಾಸ. ಅನ್ಯ ಜೀವಿಗಳ ನಾಶದಿಂದ ಪ್ರಕೃತಿ ವಿರುದ್ಧವಾದ ಕೃತ್ರಿಮತೆಯ ಅಳವಡಿಕೆಗಳಿಂದ ಮಾನವ ಸಂಕುಲಕ್ಕೆ ವಿಪತ್ತು ಒದಗುತ್ತಿದೆ. ಪ್ರಾಣಿಗಳು, ಪಕ್ಷಿಗಳು, ಜಲಚರಗಳು ನಾನಾ ರೀತಿಯ ಸಂಕಷ್ಟಕ್ಕೆ ಗುರಿಯಾಗುತ್ತಿವೆ. ಪ್ರಕೃತಿ ಸಹಜತೆಗೆ ಧಕ್ಕೆತಂದಾಗ ಪರಿಸರದಲ್ಲಾಗುವ ಪರಿವರ್ತನೆಗಳು, ಆತಂಕಗಳು, ವಿಕೋಪಗಳು ಪ್ರತ್ಯಕ್ಷ ಸಾಕ್ಷಿಯಾಗಿವೆ.

ಗುಡ್ಡ, ಬೆಟ್ಟಗಳ ಕಡಿತ, ಕೊಳವೆಬಾವಿ, ಗಣಿಗಾರಿಕೆ ಮತ್ತು ಬೃಹತ್ ಕಟ್ಟಡಗಳ ಅಡಿಪಾಯಕ್ಕಾಗಿ ಭೂ ಕೊರೆತಗಳಿಂದಾಗಿ ಭೂಮಿಯ ಆಂತರಿಕ ಸಮತೋಲನದಲ್ಲಿ ವ್ಯತ್ಯಾಸವೇರ್ಪಟ್ಟು ಭೂಕಂಪ, ಭೂಕುಸಿತಗಳಂಥ ಏರುಪೇರುಗಳು ಉಂಟಾಗುತ್ತಿವೆ.

ಕೆರೆ, ಕಾಲುವೆ, ಹಳ್ಳ, ಕೊಳ್ಳಗಳನ್ನೆಲ್ಲಾ ಮುಚ್ಚಿ ಹಾಕಿ ಬೃಹತ್ ಬಂಗಲೆಗಳು, ಬಹು ಮಹಡಿ ಕಟ್ಟಡಗಳು, ಮೇಲ್ಸೇತುವೆಗಳ ನಿರ್ಮಾಣ, ಜಲಾಶಯಗಳ ನಿರ್ಮಾಣ, ಜಲವಿದ್ಯುತ್ ಯೋಜನೆಗಳು, ಬೃಹತ್ ಕೈಗಾರಿಕೆಗಳು ಇತ್ಯಾದಿಗಳಿಗಾಗಿ ಪರಿಸರವನ್ನು ಅಸಹಜವಾಗಿ ಬಳಸುತ್ತ ಸಾಗಿರುವ ಪೈಪೋಟಿಯ ಪರಿಸ್ಥಿತಿಯಿಂದಾಗಿ ಮನುಷ್ಯನ ದುರಾಸೆಗಳೇ ಸಮಸ್ಯೆಗೆ ಕಾರಣಗಳಾಗಿವೆ. ತಾಂತ್ರಿಕ ಕಾಮಗಾರಿಗಳಿಂದಾಗಿ ನೀರಿನ ಸಂಪನ್ಮೂಲಗಳಿಗೆ ಅಡ್ಡಿ ಉಂಟಾಗಿ ಅಕಾಲಿಕ ಹಾಗೂ ವಿಪರೀತವಾದ ಮಳೆ ಆದಾಗ ಜಲ ಪ್ರವಾಹಗಳೇರ್ಪಟ್ಟು, ದಿಕ್ಕು ದೆಶೆಗಳಿಲ್ಲದೆ ನೀರು ಉಕ್ಕಿ ಹರಿಯುತ್ತಿದೆ.

ಹಚ್ಚ ಹಸುರಿನ ವೃಕ್ಷಗಳಿಂದ ಸಿಗುವ ತಂಪಾದ ವಾತಾವರಣ ಮಾಯವಾಗಿ ಸಿಮೆಂಟು ಕಾಂಕ್ರೀಟುಗಳ ಭವ್ಯ ಭವನಗಳಿಂದ ಬಿಸಿಲಿನ ಧಗೆ ಹೆಚ್ಚುತ್ತಿದೆ. ವನ ಬನಗಳನ್ನಾಶ್ರಯಿಸಿದ್ದ ಜೀವರಾಶಿಗಳು ನಾಶವಾಗುತ್ತಿವೆ. ಕೃಷಿ, ವ್ಯವಸಾಯಗಳಿಂದ ಸಂಪದ್ಭರಿವಾಗಿದ್ದ ಭೂಮಿ ಇಂದು ಸ್ವಾರ್ಥ ಪಿಪಾಸೆಯಿಂದ ಪರಿವರ್ತನೆಗಳು, ವಲಸೆಗಳು ಸರ್ವೇಸಾಮಾನ್ಯವಾಗಿವೆ.

ಪ್ರಕೃತಿಯ ಸಹಜತೆ ನಿಯಮಗಳಿಗೆ ಬದ್ಧರಾಗಿ ನಡೆದಾಗ ಮಾತ್ರ ನಮ್ಮ ಪ್ರಕೃತಿ– ನಮ್ಮ ಪರಿಸರ ಸಹಕರಿಸಬಲ್ಲವು. ಇತಿ ಮಿತಿಗಳಿಲ್ಲದೆ ಸಾಗಿರುವ ನವೀಕರಣದ, ಅಭಿವೃದ್ಧಿಯ ಹೆಸರಿನಿಂದ ಸಾಗಿರುವ ತಾಂತ್ರಿಕ ಸೃಷ್ಟಿಯ ತೊಟ್ಟಿಲಾಗಿ ನಮ್ಮ ಬೇಕುಗಳೇ ನಮ್ಮ ಬದುಕು ಎಂಬಂತೆ ಐಚ್ಛಿಕವಾಗಿ ಸಾಗುತ್ತಿರುವ ಕೈಗಾರಿಕಾ ಕಾಮಗಾರಿಗಳು ಮತ್ತಿತರ ತಾಂತ್ರಿಕ ಕೃತ್ರಿಮತೆಯ ದಾಸನಾದ ಮಾನವ ಅಭಿವೃದ್ಧಿಯ ಸೋಗಿನಲ್ಲಿ ಸ್ವಾರ್ಥಕ್ಕಾಗಿ ಯಾವುದನ್ನೂ ಲೆಕ್ಕಿಸದೆ ಪರಿಸರ ನಾಶಗೈಯುತ್ತಿರುವುದು ವಿಕೋಪಗಳಿಗೆ ಎಡೆಯಾಗುತ್ತಿವೆ. ಒಟ್ಟಿನಲ್ಲಿ ಪರಿಸರದ ದುರ್ಬಳಕೆಯಿಂದಾಗಿ, ಅತೀ ಮೇಧಾವಿತನದ ಹಿಡಿತದಿಂದಾಗಿ ನಾನಾ ರೀತಿಯ ಸಂಕಷ್ಟಗಳು, ವಾತಾವರಣ ವೈಪರಿತ್ಯಗಳು – ಸುನಾಮಿ, ಚಂಡಮಾರುತಗಳು ಇತ್ಯಾದಿಯಾಗಿ ಸಂಭವಿಸುತ್ತಾ ಪ್ರಕೃತಿ ಇಂದು ವಿನಾಶದ ಅಂಚಿನಲ್ಲಿದೆಯೆಂದು ಪರಿಗಣಿಸಬಹುದೇ?

ಪುಟ 9 ಕ್ಕೆ ➢

➢ ಪುಟ 8 ರಿಂದ.....

ವರುಣನ ಆರ್ಭಟದಿಂದಾಗಿ ತತ್ತರಿಸಿರುವ ಮನುಕುಲದ ಸಂಕಷ್ಟಗಳು, ಪ್ರಾಣಿ, ಪಕ್ಷಿಗಳು ಮುಂತಾದ ಜೀವಿಗಳು ವಿನಾಶಕ್ಕೆ ಕಾರಣ ಹುಡುಕುತ್ತಾ ಹೋದರೆ ಮಾನವಿ ವಿಕೃತಿಯಿಂದಾಗಿ ಹಳ್ಳಿ ಪಟ್ಟಣಗಳೆಲ್ಲವು ದುಸ್ಥಿತಿಗೊಳಗಾಗಿವೆ ಎಂಬುದು ಸ್ಪಷ್ಟ ಸಂಗತಿ. ಮಳೆಯ ನೀರು ಸರಾಗವಾಗಿ ಸಾಗಿ ತಮ್ಮ ಸಹಜ ಮೂಲಗಳಾದ ನದಿ, ಕೆರೆ, ಕಾಲುವೆಗಳಿಗೆ ತಲುಪಬೇಕಾದ ಮಾರ್ಗವನ್ನು ಅತಿಕ್ರಮಿಸಿದ್ದು ಇಂದಿನ ತುಂಬಲಾರದ ನಷ್ಟವಾಗಿದೆ. ರಾಜ ಕಾಲುವೆಗಳ ಅತಿಕ್ರಮಣವೇ ಈ ದುರ್ದೆಶೆಗೆ ಕಾರಣವಲ್ಲವೇ? ಇತ್ತೀಚೆಗೆ ಈ ದುಸ್ಥಿತಿಯನ್ನು ಸುಧಾರಿಸುವ ಯೋಜನೆಯಡಿಯಲ್ಲಿ ಅತಿಕ್ರಮಿತ ಭವ್ಯಕಟ್ಟಡಗಳನ್ನು ಕೆಡುತ್ತಿರುವುದು ಸಹ ದುಃಖದಾಯಕವೇ!! ಮತ್ತೆ ಇಂತಹ ಬಿಕ್ಕಟ್ಟಿನ ಪರಿಸ್ಥಿತಿಗಳು ಉಂಟಾಗದಂತೆ ಹಿತಕರ ಪರಿಹಾರಗಳನ್ನು ಸುವ್ಯವಸ್ಥಿತ ಯೋಜನೆಗಳನ್ನು ನಮ್ಮ ಸರ್ಕಾರ ಕೈಗೊಳ್ಳುವಂತಾಗಲಿ.

ವಾಯುಮಾಲಿನ್ಯ, ಜಲ ಮಾಲಿನ್ಯ, ಪರಿಸರಮಾಲಿನ್ಯ, 'ಓಝೋನ' ಪದರಕ್ಕೆ ಧಕ್ಕೆ, ಅನೇಕ ರೀತಿಯಿಂದ ವಿಷಾನಿಲಗಳ ಸೇರ್ಪಡೆ, ವಿನಾಶಕಾರಿ ಕ್ರಿಮಿ ನಾಶಕಗಳ ಬಳಕೆ, ಪ್ಲಾಸ್ಟಿಕ್ಕಿನ ಹಾವಳಿ, ಮೊಬೈಲ್‌ನಂತಹ ಪರಿಕರಗಳಿಗಾಗಿ ಒಡ್ಡುವ ತರಂಗಾಂತರ ಗಳಿಂದಾಗುವ ದುಷ್ಪರಿಣಾಮಗಳು ಇತ್ಯಾದಿಗಳು ಪರಿಸರಕ್ಕೆ ಸಂಕಷ್ಟಗಳನ್ನೊಡ್ಡುತ್ತಿವೆ.

ಅಮೂಲ್ಯವಾದ ಸಂಪನ್ಮೂಲಗಳನ್ನು ಹೊಂದಿರುವ ಪ್ರಕೃತಿಯನ್ನು ಸಂರಕ್ಷಿಸಿಕೊಂಡು ನಾವು ಬದುಕಿ ಪ್ರತಿ ಜೀವಿಗೂ ಜೀವಿಸಲು ಆದ್ಯತೆ ನೀಡಬೇಕು.

ಜಲಮಯ ನೆಲೆಯಲ್ಲಿ ಸಿಲುಕ್ಕಿದ್ದರೂ ದಾಹವಾರಿಸಲು ಗತಿಯಿಲ್ಲದ, ಸುಧಾರಿತ ಸಮಾಜದಲ್ಲಿದ್ದು ಬೆರಳ ತುದಿಯಲ್ಲೇ ಬೇಕು ಬೇಡಗಳನ್ನೂ ಪೂರೈಸುತ್ತಿರುವ ಬುದ್ಧಿ ಜೀವಿಯ ಪರಿಸ್ಥಿತಿ ಇಂದು ಉಣ್ಣಲು ಉಡಲು ತವಕಿಸುತ್ತಿರುವ ದುಸ್ಥಿತಿಯಲ್ಲಿ ಸಿಲುಕಿರುವುದು ವಿಷಾದಕರ. ಈ ದಯನೀಯತೆಯ ಬಿಕ್ಕಟ್ಟು ಮತ್ತೆ ಮರುಕಳಿಸದಂತೆ ಎಚ್ಚರಿಕೆಯಿಂದ ಪರಿಸರ ಪ್ರೇಮಿ ಯೋಜನೆಗಳು ಪ್ರಕೃತಿ ಮತ್ತು ಮಾನವನ ಸಂಬಂಧ ತಾಯಿ ಮಗುವಿನ ನಂಟಿನಂತೆ ಆರೈಕೆ– ಹಾರೈಕೆಗಳಿಂದ ಸದ್ಭರಿತವಾಗಲಿ.

●

➢ ಪುಟ 4 ರಿಂದ.....

ಪ್ರಾಚೀನ ನಮ್ಮ ಸಂಸ್ಕೃತಿಯನ್ನು ಬೆಳೆಸುವ ಮತ್ತು ಭಾರತವನ್ನು ವಿಶ್ವದ ಮಾರ್ಗದರ್ಶಕವನ್ನಾಗಿ ಮಾಡುವ ಗುರುತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಭಾರತ ಭಾರತವಾಗಿ ಬೆಳೆಯಬೇಕು 'ಇಂಡಿಯಾ' ಎನ್ನುವ ಗುಲಾಮಿ ಮನೋಭಾವದಿಂದ ಹೊರಬರುವ ಕಾಲದಲ್ಲಿರುವ ನಾವುಗಳೆಲ್ಲ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸಿದ ಈ ಸಂದರ್ಭದಲ್ಲಿ ನಮ್ಮ ನಾಗರಿಕತೆ ಮತ್ತು ಸಂಸ್ಕೃತಿಯ ಉನ್ನತಿಗಾಗಿ ಮತ್ತು ದೇಶದ ಅಭಿವೃದ್ಧಿಯಲ್ಲಿ ನಮ್ಮ ಕೊಡುಗೆಯನ್ನು ನೀಡುವ ಕಾಲ ಈಗ ಬಂದಾಗಿದೆ.

ಬನ್ನಿ ನಾವೆಲ್ಲ ದಾಸ್ಯದ ಮಾನಸಿಕತೆಯಿಂದ ಹೊರಬಂದು ಇಂಡಿಯಾದಿಂದ ಭಾರತದೆಡೆಗೆ ಸಾಗೋಣ ಅಲ್ವೆ?

●

# ಅಹಲ್ಯಾ ಉದ್ಧಾರ



ಮುನಿಮಹಾನಂದ ಒಂದು ದಿನ ತನ್ನ ಗುರುವಿನ ಬಳಿ "ಗೌತಮ ಋಷಿಯ ಶಾಪಗ್ರಸ್ತ ಪತ್ನಿಯನ್ನು ಶ್ರೀರಾಮ ತನ್ನ ಚರಣಕಮಲದಿಂದ ಎಡವಿ ಉದ್ಧರಿಸಿದನೆಂಬ ಕಥೆ ನಿಜವೇ" ಎಂದು ಪ್ರಶ್ನಿಸಿದ. ಮುಗುಳ್ನಕ್ಕ ಗುರು ಹೇಳಿದ– 'ಮಗೂ, ಇದೊಂದು ದಂತ ಕಥೆ, ಸತ್ಯವಲ್ಲ. ಶ್ರೀರಾಮನಂತಹ ಮರ್ಯಾದಾ ಪುರುಷೋತ್ತಮ ಸ್ತ್ರೀಯನ್ನು ತನ್ನ ಕಾಲಿನಿಂದ ಎಡವುದೇ? ಕಾಲು ತಾಗಿಸುವುದಿರಲಿ, ಅದರ ಕಲ್ಪನೆಯನ್ನೂ ಆತ ಮಾಡಲಾರ. ಈ ಕಥೆಯ ಅಂತರಾರ್ಥ ಬೇರೆಯೇ ಇದೆ. ಅದನ್ನು ತಿಳಿಯುವ ಅಗತ್ಯವಿದೆ.'

ಶ್ರೀರಾಮ ಭೂವಿಜ್ಞಾನ ತಿಳಿದವ. ಇದೇ ಜ್ಞಾನ ಬಳಸಿ ಪ್ರಜೆಗಳ ಉದ್ಧಾರದ ಪ್ರಯತ್ನ ಮಾಡಿದ. ಆದರೆ ಕಥೆ ಬೇರೆ ರೀತಿಯಲ್ಲೇ ಪ್ರಚಲಿತವಾಯಿತು. ಮಗು ಮಹಾನಂದ, ಇಲ್ಲಿ 'ಅಹಲ್ಯಾ' ಎಂದರೆ ಫಲವತ್ತಾಗಿದ್ದರೂ ಬೆಳೆ ಬೆಳೆಯದ ಪಾಳುಭೂಮಿ ಎಂದರ್ಥ. ಅಂದರೆ ವಜ್ರದಂತೆ ಗಡಸಾಗಿ ಹಾಳಾದ ಭೂಮಿಯನ್ನು ವಾಸ್ತವವಾಗಿ 'ಅಹಲ್ಯಾ' ಎಂದು ಕರೆಯಲಾಗುತ್ತದೆ.

ಪ್ರಭು ಶ್ರೀರಾಮಚಂದ್ರ ಸೀತಾಲಕ್ಷ್ಮಣರ ಸಮೇತ ವನವಾಸಕ್ಕೆ ಹೊರಟ. ರಾಜ್ಯದ ಗಡಿಗೆ ಬಂದ ಅವರನ್ನು ನಿಷಾದ ರಾಜ ಸ್ವಾಗತಿಸಿದ. ನನ್ನಿಂದ ತಮಗೇನಾಗಬೇಕು ಆದೇಶಿಸಿ ಎಂದು ಬೇಡಿದ. ಶ್ರೀ ರಾಮಚಂದ್ರ ನಿಷಾದರಾಜನ ಸ್ವಾಗತದಿಂದ ಸಂತುಷ್ಟನಾದ. ಆತನನ್ನು ಕುರಿತು 'ಪ್ರಿಯ ಬಂಧು, ನಿಷಾದ ರಾಜ! ಈ ಪಾಳು ಬಿದ್ದಿರುವ ಕೃಷಿಯೋಗ್ಯ ಭೂಮಿಯನ್ನು ಫಲವತ್ತಾಗಿಸಿ. ನಿಮ್ಮ ರೈತರಿಗೆ ಈ ಗಡಸು ಭೂಮಿಯನ್ನು ಉತ್ತು ನೀರು, ಗೊಬ್ಬರ ನೀಡುವಂತೆ ಹೇಳಿ. ಭೂಮಿಯನ್ನು ಕೃಷಿ ಮಾಡಿ ಬೆಳೆ ಬೆಳೆಯಿರಿ. ಇದೇ ಅಪೇಕ್ಷೆ' ಎಂದ.

ನಿಷಾದ ರಾಜ ಶ್ರೀರಾಮನ ಆದೇಶವನ್ನು ಶಿರಸಾ ವಹಿಸಿದ. ನಿಷಾದ ರಾಜ್ಯದ ರೈತರು, ಕೂಲಿಕಾರರು ಭಾರೀ ಉತ್ಸಾಹದಿಂದ ಕಷ್ಟಪಟ್ಟು ದುಡಿದರು. ನೋಡನೋಡುತ್ತಿದ್ದಂತೆಯೇ ಭೂಮಿ ನಳನಳಿಸತೊಡಗಿತು. ಈ ರೀತಿ ಶ್ರೀರಾಮನ ಹೇಳಿಕೆಯಂತೆ ವಜ್ರದಂತೆ ಗಡಸಾದ ಪೃಥ್ವಿಯನ್ನು ಫಲವತ್ತಾಗಿಸಿ ಅದರ ಉದ್ಧಾರ ಮಾಡಲಾಯಿತು. ಇದೇ ಅಹಲ್ಯಾ (ಪೃಥ್ವಿಯ) ಉದ್ಧಾರ. ಈ ವ್ಯಾಖ್ಯಾನದಿಂದ ಸಂತುಷ್ಟನಾದ ಮುನಿಮಹಾನಂದ 'ಈ ಕಥೆಯಲ್ಲಡಗಿದ ಸಂದೇಶವನ್ನು ಜನರಿಗೆಲ್ಲ ತಲುಪಿಸುವ ಅವಶ್ಯಕತೆಯಿದೆ' ಎಂದು ಉದ್ಗಾರವೆತ್ತಿದ.

# ವಿದ್ಯಾರ್ಥಿ ಜ್ಞಾನ ಮಿತ್ರ

## ನಮ್ಮ ಕರ್ನಾಟಕದ ಪುಣ್ಯ ಕ್ಷೇತ್ರಗಳು

ನಮ್ಮ ಹೆಮ್ಮೆಯ ಕನ್ನಡನಾಡು ಪುಣ್ಯಕ್ಷೇತ್ರಗಳ ಬೀಡು. ಇಲ್ಲಿ ಹಲವಾರು ಯಾತ್ರಾಸ್ಥಳಗಳು, ಗಿರಿಕ್ಷೇತ್ರಗಳು, ಸಿದ್ಧರು, ಸಂತರು ನೆಲೆಸಿದ ತಾಣಗಳು, ತೀರ್ಥಗಳು, ಮಠಮಾನ್ಯಗಳಿವೆ. ಇಲ್ಲಿಗೆ ದಿನಂಪ್ರತಿ ಯಾತ್ರಿಕರು ಬಂದು ಪುನೀತರಾಗುತ್ತಾರೆ. ಈ ನಾಡಿನ ಹಲವು ಕ್ಷೇತ್ರಗಳಲ್ಲಿ ನಿಗದಿಯಾದ ದಿನಗಳಂದು ಜಾತ್ರೆ, ರಥೋತ್ಸವಗಳು ಅವ್ಯಾಹತವಾಗಿ ನಡೆಯತ್ತಿರುತ್ತವೆ. ಹಬ್ಬ- ಹರಿದಿನಗಳಲ್ಲಂತೂ ದೇವಾಲಯಗಳಲ್ಲಿ ಜನಸಂದಣಿ ಭರಪೂರ. ಯಾತ್ರಿಕರ ಗುಂಪು ದೇಶ ವಿದೇಶಗಳಿಂದಲೂ ಮೈಸೂರಿನಲ್ಲಿ ನವರಾತ್ರಿ ಸಂದರ್ಭದಲ್ಲಿ ನಡೆಯುವ ವೈಭವದ ದಸರಾ ಉತ್ಸವಕ್ಕೆ ಆಗಮಿಸುವರು.

ಕರ್ನಾಟಕವು ಹಿರಿದಾದ ಇತಿಹಾಸ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗಳನ್ನು ಹೊಂದಿರುವ ರಾಜ್ಯವಾಗಿದೆ. ಗಂಗರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಯಾದವರು, ಹೊಯ್ಸಳರು, ವಿಜಯನಗರದ ಅರಸರು, ಯದುವಂಶದ ಅರಸರು ಈ ನಾಡನ್ನು ವಿವಿಧ ಕಲಾಘಟ್ಟಗಳಲ್ಲಿ ಆಳಿದ್ದಾರೆ. ಈಗಿನ ಆಧುನಿಕ ಆಡಳಿತದಲ್ಲಿ ಕರ್ನಾಟಕದ ಪ್ರತಿ ಜಿಲ್ಲೆಯಲ್ಲಿಯೂ ನೋಡಲೇಬೇಕಾದ ಕ್ಷೇತ್ರಗಳಿವೆ. ಹಲವು ಕ್ಷೇತ್ರಗಳು ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿಯಾಗಿವೆ. ಒಂದೊಂದು ಕ್ಷೇತ್ರವೂ ಸ್ಥಳ ಪುರಾಣದೊಂದಿಗೆ ಪ್ರಸಿದ್ಧಿಯನ್ನು ಗಳಿಸಿ ಯಾತ್ರಿಕರನ್ನು ಬರಮಾಡಿಕೊಳ್ಳುತ್ತಿದೆ. ಇವುಗಳಲ್ಲಿ ಹಂಪೆ, ಗೋಕರ್ಣ, ಶಿವಗಂಗೆ, ಉಡುಪಿ, ಘಾಟಿ ಸುಬ್ರಹ್ಮಣ್ಯ, ಶೃಂಗೇರಿ, ಧರ್ಮಸ್ಥಳ, ಬಸವನ ಬಾಗೇವಾಡಿ, ನಾನಕ್ ಝರಾ ಮುಂತಾದ ಪವಿತ್ರ ಕ್ಷೇತ್ರಗಳಿವೆ.

ಈ ಒಂದೊಂದು ಕ್ಷೇತ್ರವನ್ನು ಕನ್ನಡಿಗರಾದ ನಾವು ಪರಿಚಯ ಮಾಡಿಕೊಳ್ಳಬೇಕಾದುದು ಅವಶ್ಯವಾಗಿರುತ್ತದೆ. ಮುಂದಿನ ಸಂಚಿಕೆಯಿಂದ ಈ ಪುಣ್ಯಕ್ಷೇತ್ರಗಳ ಪರಿಚಯವನ್ನು ಮಾಡಿಕೊಂಡು ಜ್ಞಾನವನ್ನು ವಿಕಾಸಗೊಳಿಸಿಕೊಳ್ಳೋಣ.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

# ಭಾರತ ಪರಿಚಯ

**ಜೆ. ಎಂ. ಜೋಶಿ**
**ರಾಜ್ಯ ಕೋಶಾಧ್ಯಕ್ಷರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



## ಒಂದಿಷ್ಟು ಇತಿಹಾಸ

1. ಭಾರತದಲ್ಲಿ ಭತ್ತ ಬೆಳೆಯುವಿಕೆಯು ಯಾವ ನಾಗರಿಕತೆಯ ಕಾಲದಲ್ಲಿ ಪ್ರಾರಂಭವಾಯಿತು?
2. ಲಾಲ್ ಬಹಾದ್ದೂರ್ ಶಾಸ್ತ್ರಿಯವರ ಘೋಷವಾಕ್ಯವೇನು?
3. ಮೈಸೂರು ಸಂಸ್ಥಾನದಲ್ಲಿ ಪ್ರತಿನಿಧಿ ಸಭೆಯನ್ನು ಯಾವ ದಿವಾನರು ಪ್ರಾರಂಭಿಸಿದರು?
4. "ನಿಮ್ಮ ರಕ್ತ ಕೊಡಿ, ನಾನು ಸ್ವಾತಂತ್ರ್ಯ ದೊರಕಿಸಿಕೊಡುತ್ತೇನೆ" ಎಂದು ಕರೆ ನೀಡಿದ ಸ್ವಾತಂತ್ರ್ಯ ಹೋರಾಟಗಾರ ಯಾರು?
5. ಸಿಖ್ ಧರ್ಮದ ಸ್ಥಾಪಕರು ಯಾರು?

## ಜ್ಞಾನ ವಿಜ್ಞಾನ

1. ವಿಂಬಲ್ಡನ್ ಎಂಬುದು ಯಾವ ಆಟಕ್ಕೆ ಸಂಬಂಧಿಸಲ್ಪಟ್ಟಿದೆ?
2. ಒಂಭತ್ತನೇ ಏಷ್ಯನ್ ಕ್ರೀಡೆಗಳು ಎಲ್ಲಿ ನಡೆದವು?
3. ಕಿತ್ತಲೆ ಹಣ್ಣಿನಲ್ಲಿರುವ ಜೀವಸತ್ವ ಯಾವುದು?
4. ಕೆಲಸದ ಅಳತೆಯ ಮಾನವನ್ನು ತಿಳಿಸಿ
5. ಮಾನವನ ದೇಹದಲ್ಲಿನ ಯಾವ ಅಂಗವು ಕತ್ತರಿಸಿದಂತೆ ಮತ್ತೆ ಬೆಳೆಯುತ್ತ ಹೋಗುವುದು?

## ಆಗಸ್ಟ್ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ - ಉತ್ತರಗಳು**

1. ಸುಭಾಷ್‌ಚಂದ್ರ ಬೋಸ್
2. ಜ್ಯೋತಿರಾವ್ ಫುಲೆ
3. ಗೌತಮ ಬುದ್ಧ
4. ಹರ್ಷವರ್ಧನ
5. 11 (ಹನ್ನೊಂದು)

**ಜ್ಞಾನ-ವಿಜ್ಞಾನ - ಉತ್ತರಗಳು**

1. ಮಂಡ್ಯ
2. ಕೃಷ್ಣ ಮತ್ತು ಮಲಪ್ರಭ
3. ದ್ರೌಪದಿ ಮುರ್ಮು
4. ಗಡಸು ನೀರು
5. ಗಂಧಕಾಮ್ಲ

# 35ನೇ ಪ್ರತಿಭಾ ಪುರಸ್ಕಾರ

ದಿನಾಂಕ 28-8-2022ರ ಭಾನುವಾರ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ 2021-22ನೇ ಶೈಕ್ಷಣಿಕ ಸಾಲಿನಲ್ಲಿ ಬೆಂಗಳೂರು ಉತ್ತರ ಜಿಲ್ಲೆಯಲ್ಲಿರುವ ಸರ್ಕಾರಿ, ಅನುದಾನಿತ, ಬಿಬಿ ಎಂಪಿ ಅನುದಾನ ರಹಿತ ಪ್ರೌಢಶಾಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶಾಲಾ ಪ್ರಥಮಿಗರಾಗಿರುವ ವಿದ್ಯಾರ್ಥಿಗಳು ಹಾಗೂ ಶೇಕಡಾ 85 ಕ್ಕಿಂತಲೂ ಹೆಚ್ಚು ಅಂಕಗಳಿಸಿರುವ ಶಿಕ್ಷಕರ ಮಕ್ಕಳಿಗೆ "35ನೇ ಪ್ರತಿಭಾ ಪುರಸ್ಕಾರ" ಕಾರ್ಯಕ್ರಮವನ್ನು ಮಲ್ಲೇಶ್ವರಂನ ಹಿಮಾಂಶು ಜ್ಯೋತಿ ಕಲಾಪೀಠದಲ್ಲಿ ಆಯೋಜಿಸಲಾಗಿತ್ತು.

ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಸಂಗೀತ ವಿದೂಷಿ ಶ್ರೀಮತಿ ಸುಪ್ರಿತಾ ಶ್ರೀಧರ್‌ರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿಯವರಾದ ಶ್ರೀ ನಾರಾಯಣಭಟ್‌ರವರು ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರನ್ನು ಪರಿಚಯಿಸಿ ಕಾರ್ಯಕ್ರಮದಲ್ಲಿ ಹಾಜರಿದ್ದ ಎಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸಿದರು. ವೇದಿಕೆಯ ಮೇಲೆ ಉಪಸ್ಥಿತರಿಂದ ಕರ್ನಾಟಕ ಸರ್ಕಾರದ ಮಾನ್ಯ ಸಚಿವರಾದ ಶ್ರೀ ಮುನಿರತ್ನ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್. ಕೇಶವ ಪ್ರಸಾದ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಬೆಂಗಳೂರು ಉತ್ತರ ಜಿಲ್ಲೆಯ ಉಪನಿರ್ದೇಶಕರಾದ ಶ್ರೀ ಲೋಹಿತೇಶ್ವರ ರೆಡ್ಡಿ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮಹಾ ಪೋಷಕರಾದ ಕೃ.ನರಹರಿ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳ್, ಹಿಮಾಂಶು ಜ್ಯೋತಿ ಕಲಾ ಪೀಠದ ನಿರ್ದೇಶಕರಾದ ಶ್ರೀ ಬಿ.ವಿ ವಿಜಯ್‌ಕುಮಾರ್, ಸಂಘದ ಎಲ್ಲಾ ಗಣ್ಯರು ದೀಪ ಪ್ರಜ್ವಲನವನ್ನು  ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಕೋಶಾಧ್ಯಕ್ಷರಾದ ಶ್ರೀ ಜೆ.ಎಂ ಜೋಷಿರವರು ಪ್ರಸ್ತಾವಿಕ ಭಾಷಣದಲ್ಲಿ ಸಂಘವು ಬೆಳೆದು ಬಂದ ಬಗೆ ಮತ್ತು ಸಂಘದ ಮುಖಾಂತರ ನಡೆಸಲಾಗುತ್ತಿರುವ ಎಲ್ಲಾ ಕಾರ್ಯಕ್ರಮಗಳ ವಿವರಗಳನ್ನು ನೀಡಿದರು. ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳಿಗೆ ಸಂಘದ ಹಿರಿಯ ಕಾರ್ಯಕರ್ತರಾದ ಶ್ರೀ ಎಂ.ಎಸ್ ಜನಾರ್ಧನ್‌ರವರು ಪ್ರತಿಜ್ಞಾ ಬೋಧನೆಯನ್ನು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಉತ್ತರವಲಯ-3ರ ಕಾರ್ಯದರ್ಶಿ ಶ್ರೀ ಎಂ.ವಿ ಗಂಗಾಧರ ರವರು ಉತ್ತಮ ರೀತಿಯಲ್ಲಿ ನಡೆಸಿಕೊಟ್ಟರು.

ಕಳೆದ ಶೈಕ್ಷಣಿಕ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಮತ್ತು 624 ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಕರ್ನಾಟಕ ಸರ್ಕಾರ ಮಾನ್ಯ ಸಚಿವರಾದ ಶ್ರೀ ಮುನಿರತ್ನರವರು ಸ್ಮರಣಿಕೆ ಮತ್ತು ಪ್ರಶಸ್ತಿ ಪತ್ರವನ್ನು ನೀಡಿ ಅಭಿನಂದಿಸಿ ನಂತರ ಮಾತನಾಡುತ್ತಾ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಹೊರಹೊಮ್ಮಿಸಿ ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕೆಂದು ತಿಳಿಸುತ್ತಾ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಉತ್ತಮವಾದ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿರುವುದು ಸ್ವಾಗತಾರ್ಹ ಎಂದು ಅಭಿನಂದಿಸಿದರು.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್. ಕೇಶವ ಪ್ರಸಾದ್‌ರವರು ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡುತ್ತಾ ನಮ್ಮ ಭಾರತ ದೇಶದ ಇತಿಹಾಸ, ಸಂಸ್ಕೃತಿ, ಮೌಲ್ಯಗಳ ಬಗ್ಗೆ ತಿಳಿಸುತ್ತಾ ಇಡೀ ವಿಶ್ವವು ಭಾರತೀಯರನ್ನು ಉತ್ತಮವಾಗಿ ಗೌರವಿಸುತ್ತಿದೆ ಎಂದರು. ಉಕ್ರೇನ್ ಮತ್ತು ರಷ್ಯಾ ನಡುವಿನ ಯುದ್ಧದ ಬಗ್ಗೆ ತಿಳಿಸುತ್ತಾ ಅಂತಹ ಕ್ಲಿಷ್ಟ ಸಮಯದಲ್ಲೂ ಭಾರತದ ಪ್ರಧಾನಿ ಮತ್ತು ಸರ್ಕಾರ ಯಾವ ರೀತಿಯ ಪ್ರಮುಖ ಪಾತ್ರ ವಹಿಸಿ ಅಲ್ಲಿರುವ ಎಲ್ಲಾ ಭಾರತೀಯ ವಿದ್ಯಾರ್ಥಿಗಳು ಹಾಗೂ ಭಾರತೀಯರನ್ನು ಸುರಕ್ಷಿತವಾಗಿ ದೇಶಕ್ಕೆ ಕರೆಸಿತು ಎಂಬುದನ್ನು ವಿವರವಾಗಿ ತಿಳಿಸಿ, ಎಲ್ಲಾ ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳಿಗೂ ಶುಭಕೋರಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಬೆಂಗಳೂರು ಉತ್ತರ ಜಿಲ್ಲೆಯ ಉಪನಿರ್ದೇಶಕರಾದ ಶ್ರೀ ಲೋಹಿತೇಶ್ವರ ರೆಡ್ಡಿಯವರು ಶೇಕಡಾ 85ಕ್ಕಿಂತ ಹೆಚ್ಚು ಅಂಕ ಗಳಿಸಿದ ಶಿಕ್ಷಕರ ಮಕ್ಕಳಿಗೆ ಸ್ಮರಣಿಕೆ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಿ ಅಭಿನಂದಿಸಿ ಮಾತನಾಡುತ್ತಾ ವಿದ್ಯಾರ್ಥಿಗಳು ಹೆಚ್ಚಿನ ಸಮಯವನ್ನು ತಮ್ಮ ವಿದ್ಯಾಭ್ಯಾಸಕ್ಕಾಗಿ ಉಪಯೋಗಿಸಿ ತಮ್ಮ ಹೆತ್ತವರು, ಶಿಕ್ಷಕರು, ರಾಷ್ಟ್ರ ಹಾಗೂ ಸಮಾಜಕ್ಕೆ ಉತ್ತಮ ಮಾದರಿಯಾಗಬೇಕು. ಈ ರೀತಿಯ ವಿದ್ಯಾರ್ಥಿಗಳನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಗುರ್ತಿಸಿ ಪ್ರೋತ್ಸಾಹ ನೀಡುತ್ತಿದೆ ಎಂದು ತಿಳಿಸಿದರು.

ಕರ್ನಾಟಕ ಸರ್ಕಾರದ ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಶ್ರೀ ಸಿ ಎನ್ ಅಶ್ವತ್ಥ ನಾರಾಯಣ್‌ರವರು ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳಿಗೆ ಸ್ಮರಣಿಕೆ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಿ ಗೌರವಿಸಿದರು ಮತ್ತು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ದಾನಿಗಳನ್ನು ಸನ್ಮಾನಿಸಿ ಮಾತನಾಡುತ್ತಾ ನಮ್ಮ ದೇಶದಲ್ಲಿರುವ ಜನಸಂಖ್ಯೆಗೆ ಅನುಗುಣವಾಗಿ ಪ್ರತಿಭಾ ಶಾಲಿಗಳ ಕೊರತೆ ಇದೆ. ಎಲ್ಲಾ ವಿದ್ಯಾರ್ಥಿಗಳು ತಮ್ಮ ಪ್ರತಿಭೆಗಳನ್ನು ಹೊರಹೊಮ್ಮಿಸಿ ಭಾರತವು ವಿಶ್ವಕ್ಕೆ ಮಾದರಿಯಾಗುವಂತೆ ಮಾಡಿ ಎಂದು ಕರೆಕೊಟ್ಟರು. ದೇಶ ಬಲಿಷ್ಟವಾಗಲು ವಿದ್ಯಾರ್ಥಿಗಳಲ್ಲಿರುವ ಜ್ಞಾನವನ್ನು, ಪ್ರತಿಭೆಯನ್ನು ಸದುಪಯೋಗ ಮಾಡಿಕೊಳ್ಳಲು ತಿಳಿಸಿದರು. ಅತಿಥಿಗಳಾಗಿ ಆಗಮಿಸಿದ ಹಿಮಾಂಶು ಜ್ಯೋತಿ ಕಲಾ ಪೀಠದ ನಿರ್ದೇಶಕರಾದ ಶ್ರೀ ಬಿ ವಿ ವಿಜಯಕುಮಾರ್‌ರವರು ಎಲ್ಲಾ ವಿದ್ಯಾರ್ಥಿಗಳಲ್ಲಿ ಸುಪ್ತವಾದ ಚೈತನ್ಯ ಅಡಗಿದೆ. ಸಕಾಲದಲ್ಲಿ ಅದರ ಬೆಳಕನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಬೇಕು ಎಂದು ತಿಳಿಸಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಸಂಸ್ಥಾಪಕರು, ಮಹಾ ಪೋಷಕರಾದ ಕೃ.ನರಹರಿಯವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಎಲ್ಲಾ ಪ್ರತಿಭಾ ಪುರಸ್ಕೃತರನ್ನು ಅಭಿನಂದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಶ್ರೀಯುತ ಸಂದೀಪ ಬೂದಿಹಾಳ್‌ರವರು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಿ ಮಾತನಾಡುತ್ತಾ ಸಂಘವು ಬೆಳೆದು ಬಂದ ಹಾದಿ, ಸಂಘದ ಬೆಳವಣಿಗೆಗೆ ಕಾರಣಕರ್ತರಾದ ಕಾರ್ಯಕರ್ತರುಗಳ ಶ್ರಮವನ್ನು ಅಭಿನಂದಿಸಿದರು. ಎಲ್ಲಾ ವಿದ್ಯಾರ್ಥಿಗಳು ಉತ್ತಮ ಸಂಸ್ಕಾರ ಬೆಳೆಸಿಕೊಂಡು ಭವಿಷ್ಯದಲ್ಲಿ ನವ ಸಮಾಜ ನಿರ್ಮಾಣ ಮಾಡಬೇಕೆಂದು ತಿಳಿಸಿದರು. ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಗಂಗಪ್ಪನವರು ಕಾರ್ಯಕ್ರಮದಲ್ಲಿ ನೆರೆದಿದ್ದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

ಶ್ರೀಮತಿ ಜ್ಯೋತಿ ಮಹೇಶ್‌ರವರು ಸುಶ್ರಾವ್ಯವಾಗಿ ವಂದೇ ಮಾತರಂ ಹಾಡುವುದರೊಂದಿಗೆ ಕಾರ್ಯಕ್ರಮವು ಯಶಸ್ವಿಯಾಗಿ ಮುಕ್ತಾಯಗೊಂಡಿತು.

– ವರದಿ ಶ್ರೀ ಎಂವಿ ಗಂಗಾಧರ, ಕಾರ್ಯದರ್ಶಿ, ಕ.ರಾ.ಮಾ.ಶಿ.ಸಂ., ಬೆಂಗಳೂರು ಉತ್ತರ ವಲಯ-3

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-09-2022 Date of Posting 20th or 21st of every month Posted at Periodical Rate

# ಬೆಂಗಳೂರು ಉತ್ತರ ಜಿಲ್ಲೆ – 35ನೇ ಪ್ರತಿಭಾ ಪುರಸ್ಕಾರ








ಭಾರತ್@75
ಉನ್ನತ್ ಶಿಕ್ಷಣ್
ಉನ್ನತ್
ಭಾರತ್ –
ರಾಷ್ಟ್ರೀಯ
ವಿಚಾರ
ಸಂಕಿರಣವು
ಬೆಂಗಳೂರಿನಲ್ಲಿ
ನಡೆಯಿತು

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com